5



# ಹಾಡು
## (ಮಿಶ್ರಕ್ರಿಯೆ)

80

ಊರು ಊರು ನಮ್ಮೂರು
ಇಲ್ಲಿಯ ಜಾತ್ರೆಯು ಬಲು ಜೋರು
ಇಲ್ಲಿದ್ದ ಜನರು ಮುನ್ನೂರು ।

ಸಂಜೆಗೆ ಬಂದರು ಇನ್ನೂರು
ಹರುಷದಿ ಎಲ್ಲರು ತಿರುಗಿದರು
ಆಗುವರೆಷ್ಟು ಈಗ ಅವರು ?

ರಥವನು ಎಳೆದರು ಎಲ್ಲರು
ಸಿಹಿ ಸಿಹಿ ಪಾಯಸ ಉಂಡರು
ಉಲ್ಲಾಸದಿ ಸಮಯವ ಕಳೆದರು ।

ಮರುದಿನ ಹೋದರು ನಾನ್ನೂರು
ಉಳಿದವರೆಷ್ಟು ಈಗ ಅವರು ?
ಎಣಿಸಿ ಹೇಳಿರಿ ಎಲ್ಲರು ।

5



# ಹೊರಾಂಗಣ
## (ಮಿಶ್ರಕ್ರಿಯೆ)

81

**ಉದ್ದೇಶ :** ಮಿಶ್ರಕ್ರಿಯೆಯ ಕಲ್ಪನೆ ಮೂಡಿಸುವುದು.

**ವಿಧಾನ :**

- ಈ ಹಂತಕ್ಕೆ ಬಂದ ಮಕ್ಕಳನ್ನು ಹೊರತು ಪಡಿಸಿ ಉಳಿದ ಮಕ್ಕಳನ್ನು ಎರಡು ಬೇರೆ ಬೇರೆ ಗುಂಪುಗಳಾಗಿ ನಿಲ್ಲುವಂತೆ ಹೇಳುವರು.
- ಈ ಹಂತಕ್ಕೆ ಬಂದ ವಿದ್ಯಾರ್ಥಿಗೆ 2 ಗುಂಪಿನಲ್ಲಿರುವ ಎಲ್ಲಾ ಮಕ್ಕಳನ್ನು ಒಟ್ಟಿಗೆ ಸೇರಿಸಿ ಎಣಿಸಿ ಹೇಳಲು ಸೂಚಿಸುವುದು.
- ಯಾವ ಕ್ರಿಯೆಯನ್ನು ಮಾಡಿ ಮಕ್ಕಳ ಸಂಖ್ಯೆಯನ್ನು ಹೇಳಿದೆ ಎಂದು ಪ್ರಶ್ನಿಸುವುದು.
- ನಂತರ ಒಂದನೇ ತರಗತಿ ಮಕ್ಕಳನ್ನು ಆ ಗುಂಪಿನಿಂದ ಹೊರಗೆ ಕರೆದು ಪ್ರತ್ಯೇಕವಾಗಿ ನಿಲ್ಲಲು ಹೇಳುವುದು.
- ಈಗ ಹೊರಗೆ ಬಂದ ಮಕ್ಕಳ ಸಂಖ್ಯೆ ಎಷ್ಟು ಎಂದು ಕೇಳುವುದು ?
- ಒಟ್ಟು ಮಕ್ಕಳಲ್ಲಿ ಒಂದನೇ ತರಗತಿಯ ಮಕ್ಕಳ ಸಂಖ್ಯೆಯನ್ನು ಕಳೆದು ಹೇಳುವಂತೆ ಸೂಚಿಸುವುದು.
- ಒಟ್ಟು ಮಕ್ಕಳು ಎಷ್ಟಿದ್ದರು ? ಅವರಲ್ಲಿ ಒಂದನೇ ತರಗತಿ ಮಕ್ಕಳು ಎಷ್ಟಿದ್ದರು ? ನೀನು ಒಟ್ಟು ಮಕ್ಕಳಲ್ಲಿ 1ನೇ ತರಗತಿ ಮಕ್ಕಳನ್ನು ಕಳೆದಾಗ ಎಷ್ಟು ಮಕ್ಕಳು ಉಳಿದರು ಎಂದು ಕೇಳಿವುದು.

5

+ - × ÷

# ಮಿಶ್ರಕ್ರಿಯೆ
## (1 ರಿಂದ 500ರವರೆಗೆ)

82

**ಉದ್ದೇಶ :** 1-500ರವರೆಗಿನ ಸಂಖ್ಯೆಗಳ ಮಿಶ್ರಕ್ರಿಯೆ ಸಮಸ್ಯೆಗಳನ್ನು ಬಿಡಿಸುವುದು.

**ಆದಿತ್ಯವನ್ನು ಸಂತೈಸಿ**

**ಕಲಿಸುವ ಕ್ರಮ :** ಆದಿತ್ಯನ ತಾಯಿ ಉಪ್ಪಿನ ಕಾಯಿ ತಯಾರಿಸಲು 250 ನಿಂಬೆಹಣ್ಣುಗಳನ್ನು ತರಲು ಹೇಳಿದಳು. ಆದಿತ್ಯನು ಅಂಗಡಿಗೆ ಹೇಗಿ 250 ಹಣ್ಣುಗಳನ್ನು ಕೊಂಡುಕೊಂಡನು. ಅಂಗಡಿಯವನು ಒಳ್ಳೆಯ ತಾಜಾ ಹಣ್ಣುಗಳಿವೆ ಎಂದಾಗ ಮತ್ತೆ 100 ನಿಂಬೆಹಣ್ಣುಗಳನ್ನು ಕೊಂಡು ಕೊಂಡನು. ಮನೆಗೆ ಓಡುತ್ತಾ ಬರುವಾಗ ಚೀಲ ಹರಿದು ಕೆಲವು ಹಣ್ಣುಗಳು ಬಿದ್ದು ಹೋಗಿದ್ದವು. ಮನೆಯಲ್ಲಿ ಅಮ್ಮ ಹಣ್ಣುಗಳನ್ನು ಎಣಿಸಿದಾಗ 215 ಹಣ್ಣುಗಳಿದ್ದವು. ಹಾಗಾದರೆ ಹರಿದ ಚೀಲದಿಂದ ಬಿದ್ದು ಹೋದ ಹಣ್ಣುಗಳೆಷ್ಟು ? ಗಾಯಗೊಂಡಿರುವ ಆದಿತ್ಯನಿಗೆ ನೆರವಾಗಿ ಸಂತೈಸೋಣವೇ ?

ಉದಾ : 250 + 100 − 215

250 + 100 = 350 − 215 = 135

- ಇದನ್ನು ಸಮಸ್ಯಾ ರೂಪದಲ್ಲಿ ಬರೆಯಲು ಹೇಳುವುದು.
  250 + 100 − 215
- ಬರೆದು ಕೊಂಡ ಸಮಸ್ಯೆಯನ್ನು ಓದಲು ಹೇಳುವುದು.
- ಇಲ್ಲಿ ಯಾವ ಕ್ರಿಯೆ ಮೊದಲು ಮಾಡಬೇಕೆಂದು ಕೇಳುವುದು.
- ಒಂದೇ ಸಮಸ್ಯೆಯಲ್ಲಿ ಕೂಡುವ ಹಾಗೂ ಕಳೆಯುವ ಎರಡೂ ಕ್ರಿಯೆಗಳು ಇರುವುದರಿಂದ ಈ ಮಿಶ್ರ ಕ್ರಿಯೆಯಲ್ಲಿ ಮೊದಲು ಕೂಡಿಸಿ ಬಂದ ಮೊತ್ತದಲ್ಲಿ ನಂತರದ ಸಂಖ್ಯೆಯನ್ನು ಕಳೆಯುವುದು.
- ಕಳೆದಾಗ ಬಂದ ಉತ್ತರವೇ ಆದಿತ್ಯನ ಚೀಲದಿಂದ ಬಿದ್ದು ಹೋದ ಹಣ್ಣುಗಳು.
- ಹೀಗೆ ಒಂದೇ ಲೆಕ್ಕದಲ್ಲಿ ಬರುವ ಎರಡು ಕ್ರಿಯೆಗಳನ್ನು ಮಿಶ್ರಕ್ರಿಯೆ ಎನ್ನುವರು.

| | | |
|---|---|---|
| ಆದಿತ್ಯನು ಕೊಂಡ ನಿಂಬೆ ಹಣ್ಣುಗಳು | = | 250 |
| ಹೆಚ್ಚಿಗೆ ಕೊಂಡ ಹಣ್ಣುಗಳು | = | +100 |
| ಕೊಂಡ ಒಟ್ಟು ಹಣ್ಣುಗಳು | = | 350 |
| ಮನೆಗೆ ಬಂದಾಗ ಉಳಿದ ಹಣ್ಣುಗಳು : 215 | = | −215 |
| ಬಿದ್ದು ಹೋಗಿರುವ ಹಣ್ಣುಗಳು : 135 | | 135 |

(ಮಕ್ಕಳಿಗೆ ಮನದಟ್ಟಾಗುವ ತನಕ ಇದೇ ರೀತಿಯ ಲೆಕ್ಕಗಳನ್ನು ಮಾಡಿಸುವುದು)

5



# ಆಟ
## (ಮಿಶ್ರಕ್ರಿಯೆ)

**88**

**ಉದ್ದೇಶ :** ಮೊತ್ತ 500 ಕ್ಕೆ ಮೀರದಂತೆ ಸಂಕಲನ ಮತ್ತು ವ್ಯವಕಲನಗಳನ್ನೊಳಗೊಂಡ ಮಿಶ್ರಕ್ರಿಯೆಯ ಕಲ್ಪನೆ ಮೂಡಿಸುವುದು.

**ಕಲಿಕಾ ಸಾಮಗ್ರಿ :**

1) ಬಿಳಿ ಬಣ್ಣದ ಡೈಸ್ : 99, 251, 218, 235, 247, 199

2) ಬಿಳಿ ಬಣ್ಣದ ಡೈಸ್ : 249, 178, 215, 230, 240, 209

3) ಹಳದಿ ಬಣ್ಣದ ಡೈಸ್ : 93, 251, 218, 230, 247, 189

**ಆಟ ಆಡುವ ಕ್ರಮ :**

1) 3 ಡೈಸ್‌ಗಳನ್ನು ಏಕಕಾಲದಲ್ಲಿ ನೆಲದ ಮೇಲೆ ಬಿಡುವುದು.

2) ಎರಡೂ ಬಿಳಿ ಬಣ್ಣದ ಡೈಸ್‌ಗಳ ಮೇಲ್ಮುಖದಲ್ಲಿರುವ ಸಂಖ್ಯೆಗಳನ್ನು ಕೂಡಿಸಿ ಬಂದ ಮೊತ್ತದಿಂದ ಹಳದಿ ಡೈಸ್‌ನ ಮೇಲ್ಮುಖದಲ್ಲಿರುವ ಸಂಖ್ಯೆಯನ್ನು ಕಳೆಯುವುದು.

3) ಮಿಶ್ರಕ್ರಿಯೆ ರೂಪದಲ್ಲಿಯೇ ಲೆಕ್ಕಗಳನ್ನು ಬರೆದುಕೊಂಡು ಬಿಡಿಸುವುದು.

**ಸೂಚನೆ :** ವಿದ್ಯಾರ್ಥಿ ನೋಟ್‌ಪುಸ್ತಕ / ವಾಲ್‌ಸ್ಲೇಟ್‌ನಲ್ಲಿ ಲೆಕ್ಕಗಳನ್ನು ಬರೆದು ಬಿಡಿಸಲು ಸೂಚಿಸಿ.



# ಮಿಶ್ರಕ್ರಿಯೆ



## I. ಈ ಕೆಳಗಿನ ಲೆಕ್ಕಗಳನ್ನು ನೋಟು ಪುಸ್ತಕದಲ್ಲಿ ಮಾಡು.

1) 200 + 200 − 75

2) 400 + 50 − 150

3) 240 + 160 − 110

4) 375 + 125 − 150

5) 210 + 170 − 185

## II. ಕೆಳಗಿನ ಲೆಕ್ಕಗಳು ಸರಿಯೋ ತಪ್ಪೊ ತಿಳಿಸಿರಿ. ಸರಿ ಇದ್ದರೆ ಸರಿ ಎಂದು ಬರೆ, ತಪ್ಪಿದ್ದಲ್ಲಿ ತಿದ್ದು ಸರಿಪಡಿಸಿ ಬರೆ.

1) 125 + 75 − 25 = 175

2) 250 + 50 − 75 = 200

3) 240 + 110 − 90 = 90

4) 130 + 95 − 85 = 140

## III. ಈ ಕೆಳಗಿನ ಲೆಕ್ಕವನ್ನು ಮಾಡು.

1) ಉದಯನು ಬಲೆ ಬೀಸಿದಾಗ 278 ಮೀನುಗಳು ಸಿಕ್ಕಿದವು. ಇನ್ನೊಮ್ಮೆ ಬಲೆ ಬೀಸಿದಾಗ 192 ಮೀನುಗಳು ಸಿಕ್ಕಿದವು. ಅವುಗಳನ್ನು ಎತ್ತಿ ದೋಣಿಗೆ ಹಾಕುವಾಗ 75 ಮೀನುಗಳು ಜಾರಿ ಹೋದವು. ಹಾಗಾದರೆ ದೋಣಿಯಲ್ಲಿ ಉಳಿದಿರುವ ಮೀನುಗಳೆಷ್ಟು ?

5

# ನೆನಪಿನ ಆಟ

90

## ನೆನಪಿನ ಆಟದ ಬೋರ್ಡ್



5



# ನೆನಪಿನ ಆಟ

90

**ಉದ್ದೇಶ :** ಮಿಶ್ರಕ್ರಿಯೆಯ ಪುನರಾವರ್ತನೆಯೊಂದಿಗೆ ಮೌಲ್ಯ ಮಾಪನ ಮಾಡುವುದು.

**ಸಾಮಗ್ರಿ :** ಆಟದ ಬೋರ್ಡ್, 1 ಮತ್ತು 2 ಚುಕ್ಕೆ ಇರುವ ಡೈಸ್, ಬಣ್ಣದ ಗುಂಡಿಗಳು.

**ಸೂಚನೆ :** 1) ಈ ಆಟವನ್ನು ಕನಿಷ್ಠ ಇಬ್ಬರು, ಗರಿಷ್ಠ ನಾಲ್ಕು ಮಕ್ಕಳು ಆಡಬಹುದು.
2) ಮಕ್ಕಳು ಆಟ ಆಡುವಾಗ ನೋಟ್ ಪುಸ್ತಕದಲ್ಲಿ ಸಮಸ್ಯೆಗಳನ್ನು ಬರೆದುಕೊಂಡು ಬಿಡಿಸುವುದು.

**ಆಡುವ ಕ್ರಮ :**

- ಆಟವನ್ನು ಒಂದನೇ ಮನೆಯಿಂದ ಪ್ರಾರಂಭಿಸುವುದು.
- ಏಣಿಯ ತಳಭಾಗದ ಮನೆಗೆ ಗುಂಡಿ ಬಂದಾಗ ಸಮಸ್ಯೆಯನ್ನು ಬರೆದುಕೊಂಡು ಸರಿಯಾಗಿ ಬಿಡಿಸಿದರೆ ಮಾತ್ರ ಏಣಿಯನ್ನು ಏರುತ್ತಾ, ಅದರ ಕೊನೆ ತಲುಪುವ ಮನೆಗೆ ಬರುವುದು.
- ಹಾವಿನ ಬಾಯಿಯಿರುವ ಮನೆಗೆ ಗುಂಡಿ ಬಂದಾಗ ಅಲ್ಲಿರುವ ಸಮಸ್ಯೆಯನ್ನು ಬಿಡಿಸುವುದು. ಬಿಡಿಸಿದ ಉತ್ತರ ತಪ್ಪಾಗಿದ್ದರೆ ಹಾವಿನ ಬಾಯಿಯ ಮೂಲಕ ಕೆಳಮುಖವಾಗಿ ಇಳಿಯುತ್ತಾ ಬಾಲವಿರುವ ಮನೆಗೆ ತಲುಪುವುದು. ಅಲ್ಲಿರುವ ಸಮಸ್ಯೆಯನ್ನು ಬಿಡಿಸುವುದು.
- ಯಾವ ವಿದ್ಯಾರ್ಥಿಗೆ ಯಾವ ಸಮಸ್ಯೆ ಬಿಡಿಸಲು ಕಷ್ಟವಾಗಿದೆ ಎಂದು ಗುರ್ತಿಸಿಕೊಂಡು ಅವರಿಗೆ ಪುನಃ ಆ ಕಲಿಕಾಂಶವನ್ನು ಕಲಿಯಲು ಅವಕಾಶ ಕಲ್ಪಿಸಿ ಕೊಡುವುದು.

**ಸೂಚನೆ :**

ನೋಟ್ ಪುಸ್ತಕದಲ್ಲಿ ವಿದ್ಯಾರ್ಥಿಗಳು ಬರೆದು ಕೊಳ್ಳಲು ಅವಕಾಶ ನೀಡಬೇಕು.

5



# ನನ್ನ ಸಾಧನೆ

91

ಅ) ಈ ಕೆಳಗಿನ ಸಂಖ್ಯೆಯನ್ನು ಸೂಚನೆಯೊಂದಿಗೆ ಕ್ರಮವಾಗಿ ಬರೆ.

1) 101 ರಿಂದ 150ರವರೆಗೆ

2) 240 ರಿಂದ 300ರವರೆಗೆ

3) 445 ರಿಂದ 499ರವರೆಗೆ

ಆ) ಈ ಕೆಳಗಿನ ಸಂಖ್ಯೆಗಳನ್ನು ಪದಗಳಲ್ಲಿ ಬರೆ.

1) ಒಂದು ನೂರ ಇಪ್ಪತ್ತಾರು

2) ಇನ್ನೂರ ಎಂಟು

3) ಮುನ್ನೂರ ಮೂವತ್ತಾರು

ಇ) ಕೆಳಗಿನ ಸಂಖ್ಯೆಗಳಲ್ಲಿ ಕೆಳಗೆರೆ ಹಾಕಿದ ಅಂಕೆಯ ಸ್ಥಾನಬೆಲೆ ಬರೆ.

1) 1<u>4</u>7    2) <u>2</u>08    3) 36<u>4</u>

ಈ) ಕೆಳಗಿನ ಸಂಖ್ಯೆಗಳನ್ನು ಜಾಗ ಒಂದೇ ಸಮ ಇರಲಿ ಸ್ಥಾನಬೆಲೆ ಪಟ್ಟಿಯಲ್ಲಿ ಬರೆ.

1) 123    2) 246    3) 316

ಉ) 91ಕ್ಕೆ 9ನ್ನು ಸೇರಿಸಿದರೆ ಎಷ್ಟು ?

ಊ) ಈ ಸಂಖ್ಯೆಗಳನ್ನು ವಿಸ್ತರಿಸಿ ಬರೆ.

350,    380,    499

ಋ) ಈ ಕೆಳಗನ ಸಂಖ್ಯೆಗಳಲ್ಲಿ 4 ಯಾವ ಸ್ಥಾನದಲ್ಲಿದೆ ಎಂದು ಬರೆ.

1. 245    2. 426    3. 324

ಎ) ಬಿಟ್ಟ ಸಂಖ್ಯೆಗಳನ್ನು ಕ್ರಮವಾಗಿ ಬರೆ.

1. 156 ☐ 158    2. 420 ☐ 422

ಏ) ಸೂಕ್ತ ಚಿಹ್ನೆ ಬಳಸಿ ಹೆಚ್ಚು, ಕಡಿಮೆ, ಸಮ ಗುರುತಿಸು.

324 ☐ 158    410 ☐ 480    217 ☐ 217

ಐ) ಈ ಸಂಖ್ಯೆಗಳನ್ನು ಏರಿಕೆ ಕ್ರಮದಲ್ಲಿ ಬರೆ.

1. 374, 499, 231, 111, 313    2. 117, 394, 498, 299

5



# ನನ್ನ ಸಾಧನೆ

91

**ಒ) ಈ ಸಂಖ್ಯೆಗಳನ್ನು ಇಳಿಕೆ ಕ್ರಮದಲ್ಲಿ ಬರೆ.**

1. 240, 115, 342, 113
2. 118, 112, 247, 108

**ಓ) ಈ ಕೆಳಗಿನ ಲೆಕ್ಕಗಳನ್ನು ಮಾಡು.**

1. 295 + 124 = ____________
2. 289 + 190 = ____________
3. 387 + 244 = ____________
4. 417 + 184 = ____________

**ಔ) ಕನಿಷ್ಠ ಸಂಖ್ಯೆಗೆ ವೃತ್ತ, ಗರಿಷ್ಠ ಸಂಖ್ಯೆಗೆ ☐ ಗುರುತು ಹಾಕು.**

1. 399, 423, 498, 217
2. 119, 124, 237, 395

**ಅಂ) ಕೆಳಗಿನ ಲೆಕ್ಕಗಳನ್ನು ಬಿಡಿಸು.**

1. 294 + 124 − 100 = ____________
2. 249 + 204 − 120 = ____________

**ಅಃ) ಮೌಖಿಕ ಲೆಕ್ಕಗಳು (ಶಿಕ್ಷಕರು ಸಂಕಲನ ಮತ್ತು ವ್ಯವಕಲನ ಮತ್ತು ಮಿಶ್ರಕ್ರಿಯೆಗೆ ಸಂಬಂಧಪಟ್ಟ ಲೆಕ್ಕಗಳನ್ನು ಕೇಳುವುದು.**

1. ಒಂದು ಮಾವಿನ ಮರದಲ್ಲಿ 300 ಮಾವಿನ ಹಣ್ಣುಗಳಿವೆ. ಇನ್ನೊಂದು ಮರದಲ್ಲಿ 150 ಮಾವಿನ ಹಣ್ಣುಗಳಿವೆ ಎರಡೂ ಮರಗಳಲ್ಲಿ ಇರುವ ಮಾವಿನ ಹಣ್ಣಗಳೆಷ್ಟು ?
2. ಬಾಳೆಗೊನೆಯಲ್ಲಿ 250 ಬಾಳೆಹಣ್ಣುಗಳಿವೆ ಅವುಗಳಲ್ಲಿ 100 ಕೊಳೆತು ಹೋದರೆ ಉಳಿದ ಬಾಳೆ ಹಣ್ಣುಗಳೆಷ್ಟು ?
3. ಒಂದು ತೋಟದ ಮನೆಯಲ್ಲಿ 250 ತೆಂಗಿನ ಕಾಯಿಗಳಿವೆ. ಅದರಲ್ಲಿ 200ನ್ನು ತೆಗೆದು ಮಾರಿದರೆ ಉಳಿದ ತೆಂಗಿನ ಕಾಯಿಗಳು ಎಷ್ಟು ?
4. 452 ಮತ್ತು 484ರಲ್ಲಿ ದೊಡ್ಡದು ಮತ್ತು ಚಿಕ್ಕದು ಯಾವುದು ?
5. ಕೈರಬೆಟ್ಟ ಶಾಲೆಯಲ್ಲಿರುವ ಹುಡುಗರ ಸಂಖ್ಯೆ 130 ಹುಡುಗಿಯರ ಸಂಖ್ಯೆ 110 ಅವರಲ್ಲಿ 40 ವಿದ್ಯಾರ್ಥಿಗಳು ಗೈರು ಹಾಜರಾದರೆ, ಹಾಜರಾದ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು ?

6

# ಹೊರಾಂಗಣ ಆಟ

92

**ಉದ್ದೇಶ** : 100 ರಿಂದ 999ರವರೆಗಿನ ಸಂಖ್ಯೆಗಳ ಕಲ್ಪನೆ ಮೂಡಿಸುವುದು.

**ಸಾಮಗಿ** : 100ರ ಸಂಖ್ಯೆ ಬರೆದ 9 ಮಿಂಚು ಪಟ್ಟಿಗಳು.

**ಕ್ರಮ** : ನೆಲದ ಮೇಲೆ ಒಂದು ದೊಡ್ಡ ವೃತ್ತವನ್ನು ಬರೆದು ಅದರ ಸುತ್ತ ವಿದ್ಯಾರ್ಥಿಗಳನ್ನು ನಿಲ್ಲಿಸುವುದು. ಪ್ರತಿಯೊಂದು ಮಗುವಿನ ಕೈಯಲ್ಲಿ ನೂರರ ಸಂಖ್ಯೆ ಬರೆದ ಮಿಂಚುಪಟ್ಟಿಯನ್ನು ಕೊಡುವುದು. ನಂತರ 'ಎಷ್ಟಪ್ಪ ಎಷ್ಟು' ಎಂದು ಶಿಕ್ಷಕರು ಕೇಳುವುದು. ವಿದ್ಯಾರ್ಥಿಗಳು 'ನೀವು ಹೇಳಿದಷ್ಟು' ಶಿಕ್ಷಕರು 300 ಎಂದು ಹೇಳಿದಾಗ 3 ವಿದ್ಯಾರ್ಥಿಗಳು ಬಂದು ವೃತ್ತದೊಳಗೆ ನಿಲ್ಲಬೇಕು ಹೀಗೆ ಹೇಳುತ್ತಾ 900ವರೆಗೆ ಆಟವನ್ನು ಮುಂದುವರಿಸಿ ಆಟ ಆಡಿಸುವುದು.



6



# ಎಣಿಕೆ ಬರವಣಿಗೆ
## (501 ರಿಂದ 999)

93

**ಉದ್ದೇಶ :** 501 ರಿಂದ 999ರ ತನಕ ಎಣಿಸುತ್ತಾ ಬರೆಯುವ ಸಾಮರ್ಥ್ಯ ಬೆಳೆಸುವುದು.

**ಸಾಮಗ್ರಿಗಳು :** 100ರ ಸಂಖ್ಯೆ ಬರೆದ 9 ಮಿಂಚು ಪಟ್ಟಿಗಳು.

**ಕಲಿಸುವ ಕ್ರಮ :**

| ನೂರು | ಹತ್ತು | ಬಿಡಿ |
|---|---|---|
| 100<br>100<br>100<br>100<br>100 | – | 1 |
| 5 | 0 | 1 |

- ಶಿಕ್ಷಕರು ನೂರರ ಐದು ಮಿಂಚು ಪಟ್ಟಿ ಮತ್ತು ಒಂದರ (ಬಿಡಿ) ಒಂದು ಮಿಂಚುಪಟ್ಟಿ ತೋರಿಸಿ ಎಣಿಸಲು ಹೇಳುವುದು. ವಿದ್ಯಾರ್ಥಿ ಎಣಿಸಿ 501 ಎಂದು ಹೇಳಿದಾಗ ಸ್ಥಾನಬೆಲೆ ಪಟ್ಟಿಯಲ್ಲಿ ಇಟ್ಟು ಸಂಖ್ಯೆಯಲ್ಲಿ ಬರೆಯಲು ಹೇಳುವುದು.
- ಇದೇ ರೀತಿ ಮಿಂಚುಪಟ್ಟಿಗಳನ್ನು ತೋರಿಸುತ್ತ 509ರ ತನಕ ಎಣಿಸಿ ಹೇಳಿ ಬರೆಯಲು ಹೇಳುವುದು.
- ಈಗ 100ರ 5 ಮಿಂಚು ಪಟ್ಟಿ 10ರ ಒಂದು ಮಿಂಚುಪಟ್ಟಿ ತೋರಿಸಿ 510 ಎಂದು ಹೇಳಿಸಿ ಸ್ಥಾನಬೆಲೆ ಪಟ್ಟಿಯ ಸಹಾಯದಿಂದ 510ನ್ನು ಬರೆಸುವುದು. ಹಾಗೆಯೇ 520, 530...., 590ರ ತನಕ ಎಣಿಸಿ ಬರೆಯಲು ತಿಳಿಸುವುದು ಬರೆಸುವುದು.
- 501, 502, 503..... 599ರ ತನಕ ಮಿಂಚು ಪಟ್ಟಿ ಸಹಾಯದಿಂದ ಹೇಳಿಸುತ್ತ ನೋಟ್‌ಪುಸ್ತಕದಲ್ಲಿ ಬರೆಸುವುದು.
- ನಂತರ ನೂರರ ಆರು ಮಿಂಚುಪಟ್ಟಿ ತೋರಿಸಿ 600 ಎಂದು ಹೇಳಿಸಿ ಬರೆಸುವುದು. ಹಾಗೇ 700, 800, 900ನ್ನು ಮಿಂಚುಪಟ್ಟಿಗಳ ಸಹಾಯದಿಂದ ಹೇಳಿಸುತ್ತಾ ಬರೆಸುವುದು.
- ಶಿಕ್ಷಕರು 601 ರಿಂದ 700, 701 ರಿಂದ 800.......... 999ರ ತನಕ ಹೇಳಿಸುತ್ತ ನೋಟ್‌ಪುಸ್ತಕದಲ್ಲಿ ಬರೆಸುವುದು.

6



# ಆಟ

# ಎಣಿಕೆ ಬರವಣಿಗೆ

98

**ಉದ್ದೇಶ :** ಆಟದ ಮೂಲಕ ವಿದ್ಯಾರ್ಥಿಗಳು ಎಣಿಸುವ ಕೌಶಲವನ್ನು ಬೆಳೆಸಿಕೊಳ್ಳುವರು.

**ಸೂಚನೆ :** 1) ಈ ಆಟ ಆಡಲು ಕನಿಷ್ಠ ಇಬ್ಬರು ವಿದ್ಯಾರ್ಥಿಗಳು ಬೇಕು.

2) ಯಾವುದೇ ಸಂಖ್ಯೆಯಿಂದ ಆಟವನ್ನು ಪ್ರಾರಂಭಿಸಬಹುದು.

**ಆಡುವ ಕ್ರಮ :**

ವಿದ್ಯಾರ್ಥಿಗಳು ವೃತ್ತಾಕಾರವಾಗಿ ಕುಳಿತು ಸಂಖ್ಯೆಗಳನ್ನು ಕ್ರಮವಾಗಿ ಹೇಳುವುದು. ಅಂದರೆ ಮೊದಲಿಗೆ ವಿದ್ಯಾರ್ಥಿ 603 ಎಂದು ಪ್ರಾರಂಭಿಸಿದರೆ ಮುಂದಿನವರು ಮುಂದುವರೆಸುತ್ತಾ 700ರವರೆಗೆ ಹೇಳುವುದು. ಸಂಖ್ಯೆ ಹೇಳುವಾಗ ಬಿಡಿಸ್ಥಾನದಲ್ಲಿ '5' ಬಂದಾಗ 'ಕಾರ್' ಎಂದೂ, '0' ಬಂದಾಗ 'ಬಸ್' ಎಂದು ಹೇಳಬೇಕು. ಒಂದು ವೇಳೆ ಆ ರೀತಿ ಹೇಳದ ವಿದ್ಯಾರ್ಥಿ ಆಟದಿಂದ ಹೊರಕ್ಕೆ ಹೋಗಬೇಕು.

ಮುಂದಿನ ವಿದ್ಯಾರ್ಥಿ ಆ ಸಂಖ್ಯೆಯ ಮುಂದಿನ ಸಂಖ್ಯೆ ಹೇಳಬೇಕು. ತಪ್ಪು ಹೇಳಿದ ವಿದ್ಯಾರ್ಥಿ ಆಟದಿಂದ ಹೊರಗೆ ಉಳಿಯಬೇಕು. ಪುನಃ ಆಟ ಮುಂದುವರಿಸಬೇಕು.

ಉದಾ : 701, 702, 703, ಕಾರ್, 706, 707, 708, 709

ಬಸ್, 711, 712........ ಈ ರೀತಿಯಾಗಿ ಆಟ ಮುಂದುವರೆಯುತ್ತದೆ.

6



# ಅಂಕಿ ಸಂಖ್ಯೆಗಳ ಬರವಣಿಗೆ (501 ರಿಂದ 999)

99

**ಉದ್ದೇಶ :** ಅಂಕಿ ಸಂಖ್ಯೆಗಳನ್ನು ಪದಗಳಲ್ಲಿ ಮತ್ತು ಪದಗಳನ್ನು ಅಂಕಿ ಸಂಖ್ಯೆಗಳನ್ನು ಬರೆಯುವ ಸಾಮರ್ಥ್ಯ ಬೆಳೆಸುವುದು.

**ಸಾಮಗ್ರಿಗಳು :**

1) 500, 600........... 900 ಈ ರೀತಿ ಬರೆದ ಮಿಂಚುಪಟ್ಟಿಗಳು.
2) 510, 520........... 590 ಈ ರೀತಿ ಬರೆದ ಮಿಂಚುಪಟ್ಟಿಗಳು.
3) 501, 502........... 510 ಈ ರೀತಿ ಬರೆದ ಮಿಂಚುಪಟ್ಟಿಗಳು.
4) ಮೇಲಿನ ಮೂರೂ ರೀತಿಯ ಸಂಖ್ಯೆಗಳನ್ನು ಅಕ್ಷರಗಳಲ್ಲಿ ಬರೆದ ಮಿಂಚುಪಟ್ಟಿಗಳು

**ಕಲಿಸುವ ಕ್ರಮ :**

**ಹಂತ : 1**

- ವಾಲ್‌ಸ್ಲೇಟ್/ನೋಟ್ ಪುಸ್ತಕದಲ್ಲಿ 501 ರಿಂದ 510ರವರೆಗಿನ ಸಂಖ್ಯೆಗಳನ್ನು ಮೇಲಿಂದ ಕೆಳಗೆ ಕ್ರಮವಾಗಿ ಹೇಳುತ್ತ ಮಿಂಚುಪಟ್ಟಿಗಳನ್ನು ತೋರಿಸಿ ಬರೆಸುವುದು.
- ವಿದ್ಯಾರ್ಥಿ ಬರೆದ ಮೊದಲ ಸಂಖ್ಯೆಯನ್ನು ಉಚ್ಚರಿಸಿದ ರೀತಿಯಲ್ಲಿಯೇ ಸಮ ಚಿಹ್ನೆ ಹಾಕಿ ಅಕ್ಷರದಲ್ಲಿ ಐದುನೂರಾ ಒಂದು ಎಂದು ಬರೆಸುವುದು. ಹಾಗೆ 510ರ ತನಕವೂ ಬರೆಸುವುದು. ಶಿಕ್ಷಕರು ತಪ್ಪಿದ್ದಲ್ಲಿ ತಿದ್ದಿ ಬರೆಸುವುದು.
- ಈಗ 501 ರಿಂದ 510ರ ತನಕ ಅಕ್ಷರದಲ್ಲಿ ಬರೆದ ಮಿಂಚು ಪಟ್ಟಿಗಳನ್ನು ನೆಲದಲ್ಲಿ ಹರಡಿ ಕ್ರಮವಾಗಿ ಜೋಡಿಸಿ, ಓದಿ ಸಂಖ್ಯೆಗಳಲ್ಲಿ ಬರೆಯಲು ಹೇಳುವುದು ತಪ್ಪಾಗಿ ಬರೆದರೆ ಸರಿಪಡಿಸುವುದು.

**ಹಂತ : 2**

- ಹಂತ 1ರ ಕ್ರಮದಂತೆ 510, 520..... 590 ಈ ಸಂಖ್ಯೆಗಳನ್ನು ಅಕ್ಷರಗಳಲ್ಲಿ ಮತ್ತು ಅಕ್ಷರಗಳಲ್ಲಿನವುಗಳನ್ನು ಸಂಖ್ಯೆಗಳಲ್ಲಿ ಬರೆಯುವ ಸಾಮರ್ಥ್ಯ ಬೆಳೆಸುವುದು.
- ಶಿಕ್ಷಕರು ಮಕ್ಕಳ ಬರೆಯುವ ಕ್ರಮವನ್ನು ಸೂಕ್ಷ್ಮವಾಗಿ ಗಮನಿಸುತ್ತ ತಪ್ಪಿದ್ದಲ್ಲಿ ಅಲ್ಲಿಯೇ ತಿದ್ದಿ ಬರೆಸುವುದು.

**ಹಂತ : 3**

- ಈ ಹಂತದಲ್ಲೂ ಹಂತ 1ರ ಕ್ರಮದಂತೆ 500, 600.... 900ವರೆಗಿನ ಸಂಖ್ಯೆಗಳನ್ನು ಬರೆಸುವುದು.

**ಹಂತ : 4**

ಶಿಕ್ಷಕರು ಬೇರೆ ಬೇರೆ ಮಿಂಚುಪಟ್ಟಿಗಳನ್ನು ತೋರಿಸುತ್ತ ಸಂಖ್ಯೆಗಳನ್ನು ಅಕ್ಷರಗಳಲ್ಲಿ, ಅಕ್ಷರದಲ್ಲಿರುವುದನ್ನು ಸಂಖ್ಯೆಗಳಲ್ಲಿ ಬರೆಯುವಂತೆ ಸೂಚಿಸಿ ಬರೆಸುವುದು. ತಪ್ಪಿದ್ದಲ್ಲಿ ಅಲ್ಲಿಯೇ ತಿದ್ದಿ ದೃಢಪಡಿಸುವ ಕೆಲಸ ಮಾಡುವುದು.

- ಈ ಹಂತದಲ್ಲಿ ಹಲವಾರು ಸಂಖ್ಯೆಗಳನ್ನು ಅಕ್ಷರದಲ್ಲಿ ಮತ್ತು ಸಂಖ್ಯೆಯಲ್ಲಿ ಬರೆಸುವ ಕಲಿಕಾಂಶವನ್ನು ಮನದಟ್ಟುಮಾಡುವುದು.

6 

# ಆಟ

# ಸಂಖ್ಯಾ - ಪದ ವಿನೋದ

**105**

**ಉದ್ದೇಶ :** ಆಟದ ಮೂಲಕ ಮಕ್ಕಳಿಗೆ ಸ್ಥಾನ ಬೆಲೆ ಯ ಪರಿಕಲ್ಪನೆಯನ್ನು ಸ್ಪಷ್ಟ ಪಡಿಸುವುದು.

**ಸಾಮಗ್ರಿಗಳು :** ಈ ಕೆಳಗಿನ ಕಾಣಿಸಿದ ಮಿಂಚುಪಟ್ಟಿಗಳು (ಶಿಕ್ಷಕರು ಮೊದಲೇ ತಯಾರಿಸಿಟ್ಟುಕೊಳ್ಳುವುದು.)

**ಸೂಚನೆ :** ಇಲ್ಲಿರುವ ಪ್ರತೀ ಅಕ್ಷರಕ್ಕೆ ಬೇರೆ ಬೆಲೆ ಇದೆ. ಇದನ್ನು ಬಳಸಿ ಕೆಳಗೆ ಕೊಟ್ಟಿರುವ ಸುಳಿವಿನ ಮುಂದೆ ಉತ್ತರ ಬರೆಯಿರಿ. ಈ ಆಟವನ್ನು ಒಬ್ಬ ವಿದ್ಯಾರ್ಥಿಯೂ ಆಡಬಹುದು. ಶಿಕ್ಷಕರು ಬೇರೆ ಬೇರೆ ಮಿಂಟ್ಟಿಯನ್ನು ಮಾಡಿಕೊಂಡು ಆಟ ಆಡಿಸಬಹುದು.

| ಲ | ಗ | ಕ | ಮ | ಣ | ವ |
|---|---|---|---|---|---|
| 5 | 600 | 800 | 10 | 50 | 20 |

| ಪ | ನ | ಜ | ಹ | ಳ |
|---|---|---|---|---|
| 4 | 8 | 6 | 700 | 3 |

**ಸುಳಿವು :** 1) ಅಮ್ಮನ ಸರದಲ್ಲಿರುವ (ಹವಳ) ದ ಬೆಲೆ = ☐

2) ಪಾರ್ವತಿ ಪುತ್ರ (ಗಣಪ) ನಿಗೆ ಹಾಕುವ ನಮಸ್ಕಾರಗಳು = ☐

3) ಕವಿ ಬರೆದ (ಕವನ) ದಲ್ಲಿರುವ ಅಕ್ಷರಗಳು = ☐

4) ಕೆಸರಿನಲ್ಲಿ ಬೆಳೆದು ದೇವರನ್ನು ಸೇರುವ (ಕಮಲ) ಹೂಗಳು = ☐

5) (ಕಣಜ) ದಲ್ಲಿರುವ ಭತ್ತದ ಚೀಲಗಳು = ☐

6) ಲಕ್ಷ್ಯವಿಟ್ಟು ಕಲಿತ (ಗಣಿತ) ದ ಲೆಕ್ಕಗಳು = ☐

**ಆಡುವ ಕ್ರಮ :** ಮಕ್ಕಳು ತಮ್ಮ ಎದುರಿಗೆ ಮಿಂಚುಪಟ್ಟಿಗಳನ್ನು ಇಟ್ಟುಕೊಂಡು ಕರ್ಡಿನಲ್ಲಿರುವ ಸುಳಿವುಗಳನ್ನು ಓದಿ, ದೊರೆತ ಉತ್ತರಗಳ ಕಾರ್ಡ್‌ಗಳನ್ನು ಜೋಡಿಸಿ, ಬಂದ ಸಂಖ್ಯೆಗಳನ್ನು ತಮ್ಮ ಪುಸ್ತಕದಲ್ಲಿ ಬರೆದು ನಂತರ ಅವುಗಳನ್ನು ಪದಗಳಲ್ಲಿ ಬರೆಯಿರಿ.

ಉದಾ : ಅಮ್ಮನ ಸರದಲ್ಲಿರುವ ಹವಳ ದ ಬೆಲೆ

ಹ ವ ಳ

700 + 20 + 3 = [723]

723 = ಏಳು ನೂರ ಇಪ್ಪತ್ಮೂರು.

6 

# ಮೌಲ್ಯ ಮಾಪನ

106

**I. ಈ ಕೆಳಗಿನ ಸಂಖ್ಯೆಗಳನ್ನು ಸೂಚನೆಯಂತೆ ಕ್ರಮವಾಗಿ ಬರೆಯಿರಿ.**

1) 601 ರಿಂದ 625ರವರೆಗೆ ಕ್ರಮವಾಗಿ ಬರೆಯಿರಿ.

2) 798 ರಿಂದ 830ರವರೆಗೆ ಕ್ರಮವಾಗಿ ಬರೆಯಿರಿ.

3) 900 ರಿಂದ 950ರವರೆಗೆ ಕ್ರಮವಾಗಿ ಬರೆಯಿರಿ.

**II. ಈ ಕೆಳಗಿ ಸಂಖ್ಯೆಗಳನ್ನು ಪದಗಳಲ್ಲಿ ಬರೆಯಿರಿ.**

1) 796 2) 633 3) 809 4) 592 5) 900

**III. ಈ ಕೆಳಗಿನ ಪದಗಳನ್ನು ಸಂಖ್ಯೆಗಳಲ್ಲಿ ಬರೆಯಿರಿ.**

1) ಒಂಭೈನೂರ ಎಪ್ಪತ್ತಾರು.

2) ಆರುನೂರ ನಲ್ವತ್ತೈದು

3) ಏಳುನೂರ ಒಂದು

**IV. ಈ ಕೆಳಗಿನ ಸಂಖ್ಯೆಗಳಲ್ಲಿ ಕೆಳಗೆ ಗೆರೆ ಹಾಕಿದ ಅಂಕಿಯ ಸ್ಥಾನ ಬೆಲೆ ಬರೆಯಿರಿ.**

1) $6\underline{8}0$ 2) $\underline{7}91$ 3) $\underline{5}04$ 4) $99\underline{9}$

**V. ಈ ಕೆಳಗಿನ ಸಂಖ್ಯೆಗಳನ್ನು ಸ್ಥಾನ ಬೆಲೆ ಪಟ್ಟಿಯಲ್ಲಿ ಬರೆಯಿರಿ.**

| | ನೂರು | ಹತ್ತು | ಬಿಡಿ |
|---|---|---|---|
| 1) 709 | | | |
| 2) 988 | | | |
| 3) 627 | | | |

7



# ಹಾಡು

107

ಜುಮ್ಮನಕ್ ನಕ ಜುಮ್ಮಾ, ಜುಮ್ಮನಕ ನಕ ಜುಮ್ಮಾ
ಜುಮ್ಮನಕ ನಕ ಜುಮ್ಮಾ ಜುಮ್ಮನಕ ನಕ ಜುಮ್ಮ ಜುಮ್ಮನಕ ನಕ ಜುಮ್ಮಾ ॥

ಅಂಕಿಯ ಕಲಿಯೋಣ ನಾವು
ಸಂಖ್ಯೆಯ ತಿಳಿಯೋಣ ।
ಅಂಕಿ ಸಂಖ್ಯೆ ತಿಳಿಯುತ ನಾವು
ಲೆಕ್ಕವ ಮಾಡೋಣ । ಆಹಾ ಗಣಿತವ ಕಲಿಯೋಣ ॥1॥

ಬೆಟ್ಟವ ಹತ್ತೋಣ ನಾವು
ಬೆಟ್ಟವ ಇಳಿಯೋಣ ।
ಏರಿಕೆ-ಇಳಿಕೆ ತಿಳಿಯುತ ನಾವು
ಕನಿಷ್ಠ - ಗರಿಷ್ಠ ತಿಳಿಯುತ ನಾವು
ಲೆಕ್ಕವ ತಿಳಿಯೋಣ । ಆಹಾ ಗಣಿತವ ಮಾಡೋಣ ॥2॥

ಹಕ್ಕಿಯಾಗಿ ಹಾರೋಣ ನಾವು
ಹಿಂದೆ-ಮುಂದೆ ಸಾಗೋಣ।
ಹೆಚ್ಚು ಕಡಿಮೆ ಮಾಡುತ ನಾವು
ಗೂಡನು ಸೇರೋಣ ನಾವು
ಲೆಕ್ಕವ ತಿಳಿಯೋಣ । ಆಹಾ ಗಣಿತವ ಮಾಡೋಣ ॥3॥

7

# ಹೆಚ್ಚು-ಕಡಿಮೆ-ಸಮ (ಚಿಹ್ನೆ ಬಳಸಿ) ಹಿಂದೆ-ಮುಂದೆ-ಮಧ್ಯೆ (1 ರಿಂದ 999)

**108**

**ಉದ್ದೇಶ :** 1ರಿಂದ 999ರ ವರೆಗಿನ ಸಂಖ್ಯೆಗಳನ್ನು ಬಳಸಿ, ಹೆಚ್ಚು-ಕಡಿಮೆ-ಸಮ ಹಾಗೂ ಹಿಂದೆ-ಮುಂದೆ-ಮಧ್ಯದ ಸಂಖ್ಯೆಗಳನ್ನು ಗುರ್ತಿಸುವ ಸಾಮರ್ಥ್ಯ ಬೆಳೆಸುವುದು.

**ಸಾಮಗ್ರಿ :** 501 ರಿಂದ 999ರವರೆಗಿನ ಕೆಲವು ಮಿಂಚುಪಟ್ಟಿಗಳು, ಮತ್ತು > < = ಚಿಹ್ನೆಯ ಮಿಂಚು ಪಟ್ಟಿಗಳು

**ಕಲಿಸುವ ಕ್ರಮ :** ಕಲಿಕಾಂಶ ಹೆಚ್ಚು-ಕಡಿಮೆ-ಸಮ (> < =)

**ಹಂತ -1 :** ಈ ಹಂತಕ್ಕೆ ಬಂದ ವಿದ್ಯಾರ್ಥಿಗೆ ಮಿಂಚುಪಟ್ಟಿಗಳ ಗುಂಪಿನಿಂದ ಎರಡು ಮಿಂಚು ಪಟ್ಟಿಗಳನ್ನು ತೆಗೆದುಕೊಳ್ಳಲು ತಿಳಿಸುವುದು.

ಉದಾ :
- 786 ಮತ್ತು 536ರ ಸಂಖ್ಯೆಗಳಲ್ಲಿ ನೂರರ ಸ್ಥಾನದ ಸಂಖ್ಯೆಗಳನ್ನು ಗಮನಿಸಲು ಹೇಳುವುದು. ಹೆಚ್ಚು ಮತ್ತು ಕಡಿಮೆ ಸಂಖ್ಯೆಗಳನ್ನು ಹೇಳಿದಾಗ ಈ ಸಂಖ್ಯೆಗಳ ಮಧ್ಯದಲ್ಲಿ '>' ಚಿಹ್ನೆಯ ಮಿಂಚು ಪಟ್ಟಿಯನ್ನು ಇಡಲು ತಿಳಿಸುವುದು.

  ಉದಾ : [786] [>] [536] '786, 536 ಕ್ಕಿಂತ ಹೆಚ್ಚು ಎಂದು ಓದಿಸುವುದು.

- ಈ ಮಿಂಚು ಪಟ್ಟಿಯಲ್ಲಿರುವ ಸಂಖ್ಯೆಗಳನ್ನು ಬದಲಾಯಿಸಿ ಬರೆದುಕೊಳ್ಳಲು ಹೇಳಿ, ಇವುಗಳ ಮಧ್ಯ '<' ಕಡಿಮೆ ಚಿಹ್ನೆ ಬಳಸಿ '536 786 ಕ್ಕಿಂತ ಕಡಿಮೆ ಎಂದು ಓದಿಸುವುದು.

  ಉದಾ : [536] [<] [786]

**ಹಂತ -2 :**

- 969 ಮತ್ತು 969 ಎಂಬ ಎರಡು ಮಿಂಚುಪಟ್ಟಿಗಳನ್ನು ವಿದ್ಯಾರ್ಥಿಗೆ ನೀಡಿ ಪ್ರಶ್ನೆ ಕೇಳಿ ಉತ್ತರ ಪಡೆಯುವುದು.
- ಬಿಡಿ, ಹತ್ತು, ನೂರರ ಸ್ಥಾನದಲ್ಲಿ ಸಮಾನ ಸಂಖ್ಯೆಗಳಿರುವುದರಿಂದ ಈ ಎರಡು ಸಂಖ್ಯೆಗಳು ಸಮವಾಗಿವೆ. ಆದ್ದರಿಂದ 969=969 ಎಂದು ಬರೆದು, '969, 969 ಕ್ಕೆ ಸಮ' ಎಂದು ಓದುವಂತೆ ತಿಳಿಸಿ ಓದಿಸುವುದು.

7

# ಹೆಚ್ಚು-ಕಡಿಮೆ-ಸಮ (ಚಿಹ್ನೆ ಬಳಿಸಿ) ಹಿಂದೆ-ಮುಂದೆ-ಮಧ್ಯ (1 ರಿಂದ 999)

108

**ಕಲಿಕಾಂಶ :** ✦ ಹಿಂದೆ-ಮುಂದೆ-ಮಧ್ಯೆ

**ಹಂತ-1 :**

✦ 701 ರಿಂದ 800ರವರೆಗಿನ ಸಂಖ್ಯೆಗಳ ಮಿಂಚುಪಟ್ಟಿಗಳನ್ನು ವಿದ್ಯಾರ್ಥಿಗೆ ನೀಡಿ ಕ್ರಮವಾಗಿ ಜೋಡಿಸಲು ಹೇಳುವುದು.

✦ ಜೋಡಿಸಿದ ಮಿಂಚುಪಟ್ಟಿಗಳಲ್ಲಿನ ಸಂಖ್ಯೆಗಳನ್ನು ಓದಲು ಸೂಚಿಸುವುದು

✦ ಈ ಕೆಳಗಿನ ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆಯುವುದು.

1. 706ರ ಮುಂದಿನ ಎರಡು ಸಂಖ್ಯೆಗಳನ್ನು ಹೇಳು.
2. 707 ಹಾಗೂ 709ರ ಮಧ್ಯದ ಸಂಖ್ಯೆ ಹೇಳು.
3. 800ರ ಹಿಂದಿನ ಸಂಖ್ಯೆಯನ್ನು ಹೇಳು.
4. 701ರ ಹಿಂದಿನ ಸಂಖ್ಯೆಯನ್ನು ಹೇಳು.

**ಹಂತ - 2 :**

✦ ವಿದ್ಯಾರ್ಥಿಗೆ ಸಂಖ್ಯೆಗಳ ಮಿಂಚು ಪಟ್ಟಿಗಳಲ್ಲಿ ಒಂದನ್ನು ಇಡಲು ಸೂಚಿಸುವುದು.

✦ ಇಟ್ಟ ಸಂಖ್ಯೆಯ ಹಿಂದಿನ ಹಾಗೂ ಮುಂದಿನ ಸಂಖ್ಯೆಗಳ ಮಿಂಚುಪಟ್ಟಿಗಳನ್ನು ಇಡಲು ಹೇಳುವುದು.

✦ ಇದರಂತೆ ಕೆಲವು ಸಂಖ್ಯೆಗಳನ್ನು ಹೇಳಿ ಚಟುವಟಿಕೆ ಮಾಡಿಸುವುದು.

**ಹಂತ - 3 :**

✦ ವಿದ್ಯಾರ್ಥಿಗೆ ನೋಟ್ ಪುಸ್ತಕದಲ್ಲಿ ಕೆಲವು ಸಂಖ್ಯೆಗಳನ್ನು ಬರೆದುಕೊಳ್ಳಲು ಹೇಳಿ, ಅದರ ಹಿಂದಿನ, ಮುಂದಿನ ಸಂಖ್ಯೆಗಳನ್ನು ಬರೆಯಲು ತಿಳಿಸಿ, ಕಲಿಕಾಂಶದ ಕಲಿಕೆಯನ್ನು ದೃಢೀಕರಿಸಿಕೊಳ್ಳುವುದು. ಸ

7



# ಚೌಕಾಭಾರ ಆಟ (1-999)

**111**

**ಸಾಮಗ್ರಿ :** ಮಿಂಚು ಪಟ್ಟಿಗಳು



7



# ಚೌಕಾಭಾರ ಆಟ (1-999)

111

## ಆಡುವ ಕ್ರಮ

- ಆಟದ ಬೋರ್ಡ್‌ನ ಮದ್ಯದ ಚೌಕನ್ನು ಬಿಟ್ಟು ಉಳಿದ ಚೌಕಗಳಲ್ಲಿ (1 ರಿಂದ 999) ಸಂಖ್ಯೆಗಳ 32 ಮಿಂಚುಪಟ್ಟಿ ಇಡಬೇಕು. ಮಿಂಚುಪಟ್ಟಿಗಳನ್ನು ತಯಾರಿಸುವಾಗ ಒಂದೇ ಸಂಖ್ಯೆ 4 ಬಾರಿ ಬರುವಂತೆ ನೋಡಿಕೊಳ್ಳಬೇಕು.
- >, <, = ಮಿಂಚು ಫಲಕಗಳನ್ನು ಪಕ್ಕದಲ್ಲಿ ಇಟ್ಟುಕೊಳ್ಳಬೇಕು.
- ಯಾವುದೇ ಒಂದು ಮಿಂಚುಪಟ್ಟಿ ತೆಗೆದುಕೊಂಡು, ಒಂದು ಮಿಂಚುಪಟ್ಟಿ ದಾಟಿ ಇಡಬೇಕು ದಾಟುವ ಚೌಕದಲ್ಲಿ ಮಿಂಚುಪಟ್ಟಿ ಇರಲೇಬೇಕು. ಇಡುವ ಮನೆ ಖಾಲಿ ಇರಬೇಕು.
- ದಾಟಿದ ಮಿಂಚುಪಟ್ಟಿ ಹೊರಕ್ಕೆ ತೆಗೆದಿಟ್ಟುಕೊಳ್ಳಬೇಕು.
- ನಾಲ್ಕು ಅಥವಾ ಇಬ್ಬರು ಸಹಪಾಠಿಗಳು ಅನುಕ್ರಮವಾಗಿ ಆಡಿ ಮಿಂಚುಪಟ್ಟಿ ತೆಗೆದಿಟ್ಟುಕೊಳ್ಳಬೇಕು.
- ಎರಡು ಮಿಂಚುಪಟ್ಟಿಗಳು ದೊರೆತ ಮೇಲೆ ಅವೆರಡರ ನಡುವೆ ಸೂಕ್ತ ಚಿಹ್ನೆಯನ್ನು ಗುಂಪಿನಿಂದ ಹೊರತೆಗೆದು ಜೋಡಿಸಿ ನೋಟ್ ಪುಸ್ತಕದಲ್ಲಿ ಬರೆಯಬೇಕು. ಹಾಗೂ ಓದಬೇಕು.
- ಅದೇ ರೀತಿ ಆಟ ಮುಂದುವರೆಸಿ ತೆಗೆದ ಮಿಂಚುಪಟ್ಟಿಯಲ್ಲಿನ ಹಿಂದಿನ ಹಾಗೂ ಮುಂದಿನ ಸಂಖ್ಯೆಯನ್ನು ಬರೆದು, ಓದಬೇಕು.
- ಆಟ ಕೊನೆಯಾಗುವ ತನಕ ಆಡಬೇಕು. ಯಾರು ಹೆಚ್ಚ ಸಮಸ್ಯೆ ತಪ್ಪಿಲ್ಲದೆ ಬಿಡಿಸುವಿರೋ ಅವರೇ ಪ್ರಥಮ.

7

# ಕನಿಷ್ಠ-ಗರಿಷ್ಠ, ಏರಿಕೆ-ಇಳಿಕೆ (1-999)

**112**



**ಉದ್ದೇಶ :** 1-999ರವರೆಗಿನ ಸಂಖ್ಯೆಗಳಲ್ಲಿ ಕನಿಷ್ಠ-ಗರಿಷ್ಠ ಸಂಖ್ಯೆಗಳನ್ನು ಗುರ್ತಿಸುವ ಹಾಗೂ ಏರಿಕೆ-ಇಳಿಕೆ ಕ್ರಮದಲ್ಲಿ ಬರೆಯುವ ಸಾಮರ್ಥ್ಯ ಬೆಳೆಸುವುದು.

**ಸಾಮಗ್ರಿ :** ಸಂಖ್ಯೆ ಮಿಂಚುಪಟ್ಟಿಗಳು.



ಬೆಟ್ಟದ ಮೇಲಿರುವ ಸುಂದರ ದೇವಾಲಯವನ್ನು ನೋಡಲು ವಿಶ್ವಾಸನು ಮೆಟ್ಟಿಲು ಹತ್ತಬೇಕಾಗಿದೆ. ಅಲ್ಲಲ್ಲಿ ಬೋರ್ಡುಗಳನ್ನಿಟ್ಟಿರುತ್ತಾರೆ. ವಿಶ್ವಸನು ಮೆಟ್ಟಿಲುಗಳನ್ನು ಎಣಿಸುತ್ತ ಬೋರ್ಡುಗಳಲ್ಲಿ ಸಂಖ್ಯಾಕಾರ್ಡುಗಳನ್ನಿಡುತ್ತಾ ದೇವಸ್ಥಾನ ತಲುಪುತ್ತಾನೆ. ವಿಶ್ವಾಸನು ಯಾವ ಸಂಖ್ಯಾ ಕಾರ್ಡುಗಳನ್ನು ಇಟ್ಟನೆಂದು ಹೇಳುವಿರಾ ?

- ವಿಶ್ವಾಸನ ಬಳಿ ಇದ್ದ ಸಂಖ್ಯಾ ಕಾರ್ಡುಗಳು. 694 998 501 738 840 525
- ಮಕ್ಕಳಿಂದ ಮೊದಲು ಸಂಖ್ಯಾ ಕಾರ್ಡುಗಳನ್ನು ಓದಿಸುವುದು.
- ಇವುಗಳಲ್ಲಿ ಕನಿಷ್ಠ ಹಾಗೂ ಗರಿಷ್ಠ ಸಂಖ್ಯೆಗಳನ್ನು ಗುರ್ತಿಸಲು ಹೇಳುವುದು. ಕನಿಷ್ಠ ಸಂಖ್ಯೆ - 561, ಗರಿಷ್ಠ ಸಂಖ್ಯೆ 998
- ಅಂದರೆ ನೂರರ ಸ್ಥಾನದಲ್ಲಿ ಒಂದೇ ಸಂಖ್ಯೆ ಇದ್ದಾಗ ಹತ್ತರ ಸ್ಥಾನದಲ್ಲಿ ಒಂದೇ ಸಂಖ್ಯೆ ಇದ್ದಾಗ, ಬಿಡಿ ಸ್ಥಾನವನ್ನು ಗಮನಿಸಿ ಕನಿಷ್ಠ ಸಂಖ್ಯೆಗಳನ್ನು ಗುರ್ತಿಸುವುದು.
- ಮೇಲ್ಕಂಡ ಸಂಖ್ಯಾಕಾರ್ಡುಗಳನ್ನು ಏರಿಕೆ ಕ್ರಮದಲ್ಲಿ ಇಡಲು ತಿಳಿಸುವುದು.

  501, 525, 694, 738, 840, 998.
- ಇದೇ ಕಾರ್ಡುಗಳನ್ನು ಇಳಿಕೆ ಕ್ರಮದಲ್ಲಿ ಹೇಗೆ ಇಡಬೇಕೆಂದು ಪ್ರಶ್ನಿಸಿ ಮಕ್ಕಳಿಂದ ಇಡಿಸುವುದು.

**ಸೂಚನೆ :** ಇದೇ ರೀತಿ ಹಲವಾರು ಮಿಂಚು ಪಟ್ಟಿಗಳನ್ನು ಕೊಟ್ಟು ಮಕ್ಕಳಿಗೆ ಮನದಟ್ಟಾಗುವ ತನಕ ಲೆಕ್ಕಗಳನ್ನು ಮಾಡುವುದು.

7

# ಕನಿಷ್ಠ-ಗರಿಷ್ಠ, ಏರಿಕೆ-ಇಳಿಕೆ (1-999)

115

ಸಾಮಗ್ರಿ : ಸಂಖ್ಯಾ ಕಾರ್ಡುಗಳು.

1) ಸಾಮಗ್ರಿ ತಯಾರಿಕೆ :



- ಮೊದಲು ಸಂಖ್ಯಾ ಮಿಂಚುಪಟ್ಟಿಗಳನ್ನು ತಯಾರಿಸಿಟ್ಟುಕೊಳ್ಳಬೇಕು.
- ಮಿಂಚುಪಟ್ಟಿಯ ಒಂದು ಭಾಗದಲ್ಲಿ 534, 938, 998, 792, 654, 636 ಸಂಖ್ಯೆಗಳನ್ನು ಬರೆದಿಟ್ಟುಕೊಳ್ಳಬೇಕು.
- ಇನ್ನೊಂದು ಬದಿಯಲ್ಲಿ ಪ್ರಾಣಿಯ ಹೆಸರಿನ ಅಕ್ಷರಗಳನ್ನು ಬರೆಯಬೇಕು.
- ನಂತರ ಸೂಚನೆಯನ್ನು ಅನುಸರಿಸಿ ಜೀವಿಯ ಹೆಸರನ್ನು ಹೇಳಬೇಕು.
- ಇದಲ್ಲದೆ ಕೆಳಗಿನ 2ನೇ ಲೆಕ್ಕಕ್ಕೂ ಮಿಂಚುಪಟ್ಟಿಗಳನ್ನು ತಯಾರಿಸಿಟ್ಟುಕೊಳ್ಳಬೇಕು.

### ಅಡಿ ಕುಳಿತಿರುವವರು ಯಾರು ?

ಈ ಮರದಲ್ಲಿ ಒಂದು ಜೀವಿ ಅಡಗಿ ಕುಳಿತಿದೆ. ಅದನ್ನು ಕಂಡು ಹಿಡಿಯಲು ಒಂದು ಉಪಾಯವಿದೆ. ಕೆಳಗೆ ಕೊಟ್ಟಿರುವ ಸಂಖ್ಯಾ ಕಾರ್ಡುಗಳನ್ನು ಏರಿಕೆ ಕ್ರಮದಲ್ಲಿ ಬರೆದು ಜೀವಿಯನ್ನು ಕಂಡು ಹಿಡಿಯಿರಿ ಹಾಗೂ ಜೀವಿಯ ಹೆಸರನ್ನು ತಿಳಿಸಿ.

ಉದಾ :

| | | |
|---|---|---|
| 534-ಕ | 998-ರಿ | 654-ಡಿ |
| 938-ಮ | 972-ಯ | 636-ರ |

★ ಈ ಮೇಲಿನ ಕಾರ್ಡುಗಳಲ್ಲಿರುವ ಕನಿಷ್ಠ ಹಾಗೂ ಗರಿಷ್ಠ ಸಂಖ್ಯೆ ಯಾವುದು ? ಎಂದು ಕೇಳಿ ಉತ್ತರ ಪಡೆಯುವುದು.

2. ಆದರ್ಶನು ಅಸ್ತವ್ಯಸ್ತವಾಗಿ ಚೆಲ್ಲಿದ ಸಂಖ್ಯಾಕಾರ್ಡುಗಳನ್ನು ಇಳಿಕೆ ಕ್ರಮದಲ್ಲಿ ಜೋಡಿಸಿ.



7 

# ಹೆಚ್ಚು-ಕಡಿಮೆ-ಸಮ, ಹಿಂದೆ-ಮುಂದೆ-ಮಧ್ಯೆ ಕನಿಷ್ಠ-ಗರಿಷ್ಠ, ಏರಿಕೆ-ಇಳಿಕೆ (1-999)

**116**

**I.** ಇಲ್ಲಿ ಕೊಟ್ಟಿರುವ ಸಂಖ್ಯೆಗಳಲ್ಲಿ ಕನಿಷ್ಠ ಮತ್ತು ಗರಿಷ್ಠ ಸಂಖ್ಯೆಗಳನ್ನು ಗುರ್ತಿಸಿ ಪಕ್ಕದ ಡಬ್ಬಿದಲ್ಲಿ ಬರೆ.

1) 610, 537, 735, 824, 950

2) 820, 508, 644, 765, 804

3) 450, 560, 715, 800, 910

| ಗರಿಷ್ಠ | ಕನಿಷ್ಠ |
|---|---|
| | |
| | |
| | |

**II.** ಇಲ್ಲಿ ಕೊಟ್ಟಿರುವ ಸಂಖ್ಯೆಗಳಲ್ಲಿ ಹಿಂದಿನ, ಮುಂದಿನ, ಮಧ್ಯದ ಸಂಖ್ಯೆ ತಿಳಿಸು.

1) 100 ____ 102

2) ____ 30 ____

3) ____ ____ 700

**III.** ಕೊಟ್ಟಿರುವ ಸಂಖ್ಯೆಗಳನ್ನು ಏರಿಕೆ ಕ್ರಮದಲ್ಲಿ ಬರೆ.

1) 600, 500, 701, 824, 400

2) 709, 809, 609, 509, 909

**IV.** ಕೊಟ್ಟಿರುವ ಸಂಖ್ಯೆಗಳನ್ನು ಇಳಿಕೆ ಕ್ರಮದಲ್ಲಿ ಬರೆ.

1) 500, 900, 700, 600, 400, 800

2) 850, 650. 750, 550, 950

**V.** ಹೆಚ್ಚು, ಕಡಿಮೆ, ಸಮ, ಚಿಹ್ನೆ ಬಳಸಿ ಬಿಟ್ಟ ಸ್ಥಳಗಳನ್ನು ತುಂಬು.

1) 755 ____ 625  2) 550 ____ 765

3) 826 ____ 784  4) 998 ____ 998

## VI. ಸಮಸ್ಯೆಗಳನ್ನು ಓದಿ ಪ್ರಶ್ನೆಗಳಿಗೆ ಉತ್ತರಿಸಿ.

1) ರಾಮನ ಬಳಿ 650 ರೂಪಾಯಿಗಳಿವೆ. ವಿಜಯನ ಬಳಿ 780 ರೂಪಾಯಿಗಳಿವೆ.

- ಅತಿ ಹೆಚ್ಚು ಹಣ ಯಾರ ಬಳಿ ಇದೆ ?
- ರಾಮ ಮತ್ತು ವಿಜಯನ ಬಳಿ ಇರುವ ಹಣವನ್ನು ಸೂಕ್ತ ಚಿಹ್ನೆ ಬಳಸಿ ಬರೆ.

**2) ಕೆಳಗಿನ ಹುಡುಗರ ಕ್ರಮಸಂಖ್ಯೆ ನೋಡಿ ಪ್ರಶ್ನೆಗಳಿಗೆ ಉತ್ತರಿಸಿ.**

ರವಿಯ ಕ್ರಮ ಸಂಖ್ಯೆ 650

ಪ್ರಕಾಶನ ಕ್ರಮ ಸಂಖ್ಯೆ 651

ಕಿರಣನ ಕ್ರಮಸಂಖ್ಯೆ 652

ರೋಶನನ ಕ್ರಮಸಂಖ್ಯೆ 653

1. ರವಿಯ ಕ್ರಮ ಸಂಖ್ಯೆಯ ಮುಂದಿನ ಕ್ರಮ ಸಂಖ್ಯೆ ಯಾವುದು ?
2. ಪ್ರಕಾಶ ಮತ್ತು ರೋಶನರ ಕ್ರಮ ಸಂಖ್ಯೆಯ ಮಧ್ಯದ ಕ್ರಮ ಸಂಖ್ಯೆ ಯಾವುದು ?
3. ಪ್ರಕಾಶನ ಕ್ರಮ ಸಂಖ್ಯೆಯ ಹಿಂದಿನ ಕ್ರಮಸಂಖ್ಯೆ ಯಾವುದು ?

8



# ಹಾಡು

117

ನೂರು ನೂರು ಇನ್ನೂರು
ಶಾಲೆಗೆ ಮಕ್ಕಳು ಬಂದಿಹರು

ಇನ್ನೂರು ನೂರು ಮುನ್ನೂರು
ನಾಡಗೀತೆಯ ಹಾಡಿದರು

ಮುನ್ನೂರು ನೂರು ನಾನ್ನೂರು
ಪ್ರಗತಿಯ ನೋಟವ ನೋಡಿದರು

ನಾನ್ನೂರು ನೂರು ಐನೂರು
ಭಾಷೆಯ ಕಾರ್ಡನು ತೆಗೆದಿಹರು

ಐನೂರು ನೂರು ಆರ್ನೂರು
ಕನ್ನಡ ಪದಗಳ ಓದಿದರು

ಆರ್ನೂರು ನೂರು ಏಳ್ನೂರು
ಗಣಿತದ ಲೆಕ್ಕವ ಬಿಡಿಸಿದರು

ಏಳ್ನೂರು ನೂರು ಎಂಟ್ನೂರು
ಇಂಗ್ಲೀಷ್ ಗೀತೆಯ ಹಾಡಿದರು

ಎಂಟ್ನೂರುನೂರು ಒಂಭೈನೂರು
ಸಮೀಕ್ಷೆ ನಡೆಸಲು ತೆರಳಿದರು

ಎಲ್ಲರು ಸೇರಿ ಆಡಿದರು
ಮನೆಯ ಕಡೆಗೆ ಓಡಿದರು.



8

# ಸಂಕಲನ (1-999)

118

**ಉದ್ದೇಶ :** ಸಂಕಲನ ಕ್ರಿಯೆ ಮಾಡುವ ಸಾಮರ್ಥ್ಯ ಗಳಿಸುವುದು.

**ಸಾಮಗ್ರಿಗಳು :** 1 ರಿಂದ 6ರ ತನಕ ಬರೆದ ಡೈಸ್, ಬೆಂಕಿಕಡ್ಡಿಗಳು

| ನೂರು | ಹತ್ತು | ಬಿಡಿ |
|---|---|---|



**ಸೂಚನೆ :**

- ಮಕ್ಕಳನ್ನು ವೃತ್ತಾಕಾರದಲ್ಲಿ ನಿಲ್ಲಿಸಿ ನೆಲದ ಮೇಲೆ ಮೇಲಿನ ಚಿತ್ರದಂತೆ ಮೂರು ಚೌಕಗಳನ್ನು ರಚಿಸಿ ಅದರ ಮೇಲೆ ಬಿಡಿ, ಹತ್ತು, ನೂರು ಎಂದು ಬರೆಯುವುದು.
- ಬಿಡಿಸ್ಥಾನದಲ್ಲಿ 6 ಕಡ್ಡಿಗಳನ್ನು ಇಡುವುದು ಹತ್ತರ ಸ್ಥಾನದಲ್ಲಿ ಹತ್ತರ 6 ಕಟ್ಟುಗಳನ್ನು ಇಡುವುದು. ನೂರರ ಸ್ಥಾನದಲ್ಲಿ ನೂರರ 6 ಕಟ್ಟುಗಳನ್ನು ಇಡುವುದು, ಒಂದು ಡೈಸ್‌ನ್ನು ತಯಾರಿಸಿ ಅದರ ಮೇಲೆ 1 ರಿಂದ 6ರ ತನಕ ಬರೆಯುವುದು.
- 1 ರಿಂದ 6 ತನಕ ಬರೆದ ಡೈಸ್‌ನ್ನು ಮಗುವಿಗೆ ನೀಡಿ ಬಿಡಿಸ್ಥಾನದಲ್ಲಿ ನಿಂತು ಮೇಲಕ್ಕೆ ಚಿಮ್ಮಿ ಮೇಲ್ಮುಖವಾಗಿ ಬಿದ್ದ ಸಂಖ್ಯೆಯಷ್ಟು ಕಡ್ಡಿಗಳನ್ನು ತೆಗೆದುಕೊಳ್ಳಲು ತಿಳಿಸುವುದು.
- ಹತ್ತರ ಸ್ಥಾನದಲ್ಲಿ ನಿಂತು ಅದೇ ಡೈಸ್‌ನ್ನು ಮೇಲಕ್ಕೆ ಚಿಮ್ಮಿದಾಗ ಮೇಲ್ಮುಖವಾಗಿ ಬಿದ್ದ ಸಂಖ್ಯೆಯಷ್ಟು ಹತ್ತರ ಕಟ್ಟುಗಳನ್ನು ತೆಗೆದುಕೊಳ್ಳುವುದು
- ಹಾಗೆ ನೂರರ ಸ್ಥಾನದಲ್ಲಿ ನಿಂತು ಡೈಸ್‌ನ್ನು ಮೇಲಕ್ಕೆ ಚಿಮ್ಮಿದಾಗ ಮೇಲ್ಮುಖವಾಗಿ ಬಿದ್ದ ಸಂಖ್ಯೆಯಷ್ಟು ನೂರರ ಕಟ್ಟುಗಳನ್ನು ತೆಗೆದುಕೊಳ್ಳುವುದು.
- ಹೀಗೆ ತೆಗೆದುಕೊಂಡ ಎಲ್ಲಾ ಕಡ್ಡಿ ಮತ್ತು ಕಟ್ಟುಗಳನ್ನು ಕೂಡಿಸಿ ಹೇಳಲು ತಿಳಿಸುವುದು.

8



# ಸಂಕಲನ

## (ಮೊತ್ತ 999ಕ್ಕೆ ಮೀರದಂತೆ ದಶಕ ರಹಿತ ಸಂಕಲನ)

**119**

**ಉದ್ದೇಶ** : ವಿಸ್ತರಣಾ ರೂಪದ ದಶಕ ರಹಿತ ಸಂಕಲನ ಮಾಡುವುದು.

ವಿಲ್ಸನ್ ತಂದೆಯ ಜೊತೆ ಬಟ್ಟೆ ಅಂಗಡಿಗೆ ಹೋಗಿ 437ರೂ. ಬೆಲೆಯ ಪ್ಯಾಂಟ್ ಮತ್ತು 352ರೂ. ಬೆಲೆಯ ಅಂಗಿಯನ್ನು ತೆಗೆದುಕೊಂಡನು ವಿಲ್ಸನನ ತಂದೆಯ ಬಳಿ 100ರೂ. ಗಳ, 10 ರೂ. ಗಳ ಮತ್ತು 1ರೂ. ನೋಟುಗಳು ಮಾತ್ರ ಇದ್ದವು. ವಿಲ್ಸನನ ತಂದೆ ವಿಲ್ಸನನ ಹತ್ತಿರ ಎಷ್ಟು ನೂರು, ಎಷ್ಟು ಹತ್ತುಗಳು ಮತ್ತು ಎಷ್ಟು 1ರೂ. ನೋಟುಗಳನ್ನು ನೀಡಬೇಕು ಎಂದು ಕೇಳಿದರು. ವಿಲ್ಸನನ ಜಾಗದಲ್ಲಿ ನೀನು ಇದ್ದಿದ್ದರೆ ಈ ಸಮಸ್ಯೆಯನ್ನು ಹೇಗೆ ಬಗೆಹರಿಸುತ್ತಿದ್ದೆ ?

- ವಿಲ್ಸನನು ತೆಗೆದುಕೊಂಡ ಪ್ಯಾಂಟಿನ ಮತ್ತು ಅಂಗಿಯ ಬೆಲೆಯನ್ನು ಒಂದರ ಕೆಳಗೆ ಒಂದು ಬರೆದುಕೊಳ್ಳಲು ಸೂಚಿಸುವುದು.

  ವಿಲ್ಸನನು ತೆಗೆದುಕೊಂಡ ಪ್ಯಾಂಟಿನ ಬೆಲೆ ರೂ. 437

  ಅಂಗಿಯ ಬೆಲೆ ರೂ. 352

- ಪ್ಯಾಂಟಿನ ಮತ್ತು ಅಂಗಿಯ ಬೆಲೆಯನ್ನು ವಿಸ್ತರಿಸಿ ಬರೆಯಲು ಸೂಚಿಸುವುದು.

$$437 = 400 + 30 + 7$$
$$352 = 300 + 50 + 2$$

- ಬಿಡಿಸ್ಥಾನದಿಂದ ಕೂಡಿಸಲು ಪ್ರಾರಂಭಿಸಿ ಕೆಳಗಡೆ ಮೊತ್ತವನ್ನು ಬರೆಯಲು ಸೂಚಿಸುವುದು.

$$437 = 400 + 30 + 7$$
$$352 = 300 + 50 + 2$$
$$789 = 700 + 80 + 9$$

- ಹಾಗಾದರೆ ವಿಲ್ಸನನ ತಂದೆ ನೂರರ ನೋಟು 7, ಹತ್ತರ ನೋಟು 8 ಮತ್ತು 1ರೂ. ನ 9 ನೋಟುಗಳನ್ನು ನೀಡಬೇಕು ಅಲ್ಲವೆ ?

**ಹಂತ-2 : ಸಂಕ್ಷಿಪ್ತ ರೂಪದ ಸಂಕಲನ**

| | ನೂ. | ಹ. | ಬಿ |
|---|---|---|---|
| | 2 | 7 | 2 |
| + | 5 | 1 | 4 |

- ಬಿಡಿ ಸ್ಥಾನದ ಅಂಕೆಗಳನ್ನು ಕೂಡಿಸಿ ಬಿಡಿ ಸ್ಥಾನದಲ್ಲಿ ಬರೆಯಲು ಸೂಚಿಸುವುದು.
- ಹತ್ತು ಮತ್ತು ನೂರರ ಸ್ಥಾನದ ಅಂಕಿಗಳನ್ನು ಕೂಡಿ ಸ್ಥಾನಕ್ಕೆ ಅನುಗುಜನವಾಗಿ ಬರೆದು ಮೊತ್ತ ಎಷ್ಟು ಎಂದು ಹೇಳುವಂತೆ ತಿಳಿಸುವುದು.

**ಹಂತ-3 : ಅಡ್ಡ ಸಾಲುಗಳಲ್ಲಿ ಸಂಕಲನ**

ನೂ ಹ ಬಿ    ನೂ ಹ ಬಿ    ನೂ ಹ ಬಿ

4 4 8 – 2 5 9 = | 3 | 9 | 6 |

- ಮೊದಲು ಬಿಡಿ, ನಂತರ ಹತ್ತು ಮತ್ತು ನೂರರ ಸ್ಥಾನದ ಅಂಕಿಗಳನ್ನು ಕೂಡಿ ಮೊತ್ತವನ್ನು ಸ್ಥಾನಕ್ಕೆ ಅನುಗುಣವಾಗಿ ಬರೆಯಲು ತಿಳಿಸುವುದು.

8



# ಮೌಖಿಕ ಲೆಕ್ಕಗಳು
## ಸಂಕಲನ ದಶಕ ರಹಿತ (1-999)

**125**

1) ಒಂದು ಮೇಜಿನ ಬೆಲೆ 450 ರೂ.ಗಳು, ಒಂದು ಕುರ್ಚಿಯ ಬೆಲೆ 200ರೂ. ಗಳಾದರೆ ಮೇಜು ಮತ್ತು ಕುರ್ಚಿಯ ಒಟ್ಟು ಬೆಲೆ ಎಷ್ಟು ?

2) ಒಂದು ಚಾಕಲೇಟು ಡಬ್ಬದಲ್ಲಿ 500 ಚಾಕಲೇಟುಗಳಿವೆ. ಇನ್ನೊಂದು ಡಬ್ಬದಲ್ಲಿ 450 ಚಾಕಲೇಟುಗಳಿವೆ. ಹಾಗಾದರೆ ಎರಡೂ ಡಬ್ಬಗಳಲ್ಲಿರುವ ಒಟ್ಟು ಚಾಕಲೇಟುಗಳು ಎಷ್ಟು ?

3) ಒಂದು ಬುಟ್ಟಿಯಲ್ಲಿ 500 ಮಾವಿನ ಹಣ್ಣುಗಳಿವೆ. ಇನ್ನೊಂದು ಬುಟ್ಟಿಯಲ್ಲಿ 200 ಮಾವಿನ ಹಣ್ಣುಗಳಿದ್ದರೆ ಎರಡೂ ಬುಟ್ಟಿಗಳಲ್ಲಿರುವ ಮಾವಿನ ಹಣ್ಣುಗಳ ಮೊತ್ತ ಕಂಡು ಹಿಡಿ.

4) ರಾಧಳ ಹುಟ್ಟು ಹಬ್ಬದಂದು ಅವಳ ತಂದೆ 300 ರೂ. ಗಳನ್ನೂ, ಅವಳ ತಾಯಿ 200ರೂ.ಗಳನ್ನೂ ಹಾಗೂ ಅವಳ ಅಣ್ಣ ಅವಳಿಗೆ 300ರೂ. ಗಳನ್ನು ಕೊಟ್ಟರೆ ರಾಧಳ ಹತ್ತಿರ ಇರುವ ಒಟ್ಟು ಹಣ್ಣವನ್ನು ಕಂಡುಹಿಡಿ.

5) ರಾಜುಗೆ ರವಿಯು 245 ರೂ.ಗಳನ್ನು, ಪ್ರಕೃತಿಯು 345 ರೂ.ಗಳನ್ನು ಹಾಗೂ ನೇತ್ರಳು 425 ರೂ.ಗಳನ್ನು ಕೊಟ್ಟರು ಹಾಗಾದರೆ ರಾಜುವಿನ ಬಳಿ ಇರುವ ಒಟ್ಟು ಹಣವೆಷ್ಟು?

6) ಸುಜಾತಳು ಬಟ್ಟೆ ಅಂಗಡಿಯಲ್ಲಿ 380 ರೂ.ನ ಒಂದು ಸೀರೆಯನ್ನು 284 ರೂ.ನ ಒಂದು ಸೀರೆಯನ್ನು ಕೊಂಡರೆ ಅಂಗಡಿಯವನಿಗೆ ಒಟ್ಟು ಎಷ್ಟು ಹಣ ನೀಡಬೇಕು?

8



# ಸಂಕಲನ

## (ಮೊತ್ತ 999ಕ್ಕೆ ಮೀರದಂತೆ ದಶಕ ಸಹಿತ ಸಂಕಲನ)

126

**ಉದ್ದೇಶ** : 1-999ರವರೆಗಿನ ಸಂಖ್ಯೆಗಳನ್ನು ವಿಸ್ತರಿಸಿ ಬರೆದು ಸಂಕಲನ ಮಾಡುವುದು.

**ಸಮಸ್ಯೆ** :

```
   528
 + 396
```

**ಹಂತ : 1**

**ಕಲಿಸುವ ಕ್ರಮ :**

- ನೆಲದ ಮೇಲೆ / ವಾಲ್ ಸ್ಲೇಟಿನ ಮೇಲೆ ಮೇಲಿನ ಸಮಸ್ಯೆಯನ್ನು ಬರೆದುಕೊಂಡು ಅದರ ಮುಂದೆ ವಿಸ್ತರಣಾ ರೂಪವನ್ನು ಬರೆಯಲು ತಿಳಿಸುತ್ತಾ ಬರೆಸುವುದು.

```
   528  →  500 + 20 + 8
 + 396  →  300 + 90 + 6
```

- ಬಿಡಿ ಸ್ಥಾನದಿಂದ ಕೂಡಲು ಪ್ರಾರಂಭಿಸುವುದು. 8+6=14 ಇದರಲ್ಲಿ 1 ಹತ್ತು ಮತ್ತು 4 ಬಿಡಿಗಳಿರುವುದರಿಂದ 4ನ್ನು ಬಿಡಿ ಸ್ಥಾನದಲ್ಲಿ ಬರೆದು 1 ಹತ್ತನ್ನು ಹತ್ತರ ಸ್ಥಾನಕ್ಕೆ ದಶಕ ಒಯ್ಯುವುದು.
- ನಂತರ ಹತ್ತರ ಸ್ಥಾನದಲ್ಲಿನ ಸಂಖ್ಯೆಗಳನ್ನು ಕೂಡುವುದು. 20+90 ಮತ್ತು ದಶಕ ಬಂದ 10 ಸೇರಿ ಒಟ್ಟು 120 ಆಗುವುದು, ಅದರಲ್ಲಿ 1ನೂರು ಮತ್ತು 2 ಹತ್ತುಗಳಿರುವುದರಿಂದ 1 ನೂರನ್ನು ನೂರರ ಸ್ಥಾನಕ್ಕೆ ದಶಕ ಒಯ್ಯುವುದು. 2 ಹತ್ತು ಅಂದರೆ 20ನ್ನು ಹತ್ತರ ಸ್ಥಾನದಲ್ಲಿ ಬರೆಯಬೇಕೆಂದು ತಿಳಿಸುವುದು.

```
                   [10]
   528  →  500 +  20 + 8
 + 396  →  300 +  90 + 6
 ------------------------
                  [1] 4
 ------------------------
          [100]   [10]
   528  →  500 +  20 + 8
 + 396  →  300 +  90 + 6
 ------------------------
           [1]    20 + 4
 ------------------------
```

- ನಂತರ ನೂರರ ಸ್ಥಾನದಲ್ಲಿರುವ (100+500+300)ನ್ನು ಕೂಡಿದಾಗ 900 ಆಗುವುದು. ಅದನ್ನು ಕೂಡಿ ನೂರರ ಸ್ಥಾನದಲ್ಲಿ ಬರೆಯಬೇಕೆಂದು ಮನವರಿಕೆ ಮಾಡುವುದು.

```
          [100]
   528  →  500 + 20 + 8
 + 396  →  300 + 90 + 6
 -----------------------
           900 + 20 + 4
 -----------------------
```

8



# ಸಂಕಲನ

## (ಮೊತ್ತ 999ಕ್ಕೆ ಮೀರದಂತೆ ದಶಕ ಸಹಿತ ಸಂಕಲನ)

126

**ಹಂತ : 2**

**ಸಂಕ್ಷಿಪ್ತ ರೂಪದ ಸಂಕಲನ**

```
    4 2 8   →  ಮೊದಲಿಗೆ ಬಿಡಿಸ್ಥಾನದಿಂದ ಕೂಡಲು ಪ್ರಾರಂಭಿಸಲು ತಿಳಿಸುವುದು.
  + 3 8 4   →  ದಶಕ ಬಂದರೆ ಮುಂದಿನ ಸ್ಥಾನಕ್ಕೆ ಒಯ್ಯಬೇಕೆಂದು ತಿಳಿಸುವುದು.
  -------
    8 1 2   →  ಹಾಗೆ ಹತ್ತು ಮತ್ತು ನೂರರ ಸ್ಥಾನವನ್ನೂ ಕೂಡುವುದು ಮೊತ್ತವನ್ನು
  -------      ಸ್ಥಾನಕ್ಕನುಗುಣವಾಗಿ ಬೇಕು ಎಂಬುದನ್ನು ಸ್ಪಷ್ಟಪಡಿಸುವುದು.
```

**ಹಂತ : 3**

**ಅಡ್ಡಸಾಲುಗಳಲ್ಲಿ ಸಂಕಲನ :**

| ನೂ | ಹ | ಬಿ | | ನೂ | ಹ | ಬಿ | | ನೂ | ಹ | ಬಿ |
|---|---|---|---|---|---|---|---|---|---|---|
| 2 | 9 | 6 | – | 5 | 7 | 4 | = | | | |

- ✥ ಬಿಡಿಸ್ಥಾನದಿಂದ ಕೂಡಲು ಪ್ರಾರಂಭಿಸುವುದು
- ✥ ದಶಕ ಬಂದರೆ ಮುಂದಿನ ಸ್ಥಾನಕ್ಕೆ ಒಯ್ಯುವುದು.
- ✥ ಹಾಗೆ ಹತ್ತು ಮತ್ತು ನೂರರ ಸ್ಥಾನವನ್ನು ಕೂಡುವುದು, ಮೊತ್ತವನ್ನು ಸ್ಥಾನಕ್ಕನುಗುಣವಾಗಿ ಬರೆಸುವುದು.

8



# ಆಟ

## ಸಂಕಲನ (ಮೊತ್ತ 999ಕ್ಕೆ ಮೀರದಂತೆ)

131

**ಉದ್ದೇಶ :** ಮೊತ್ತ 999ಕ್ಕೆ ಮೀರದಂತೆ ವಿಸ್ತರಣಾ ರೂಪ ಸಂಕಲನ, ಸಂಕ್ಷಿಪ್ತರೂಪ ಮತ್ತು ಅಡ್ಡಸಾಲಿನಲ್ಲಿ ಮಾಡುವುದು.

**ಸಾಮಗ್ರಿ :** ಆಟದ ಬೋರ್ಡ್, 4 ಹುಣಸೆ ಬೀಜ




### ಆಡುವ ಕ್ರಮ

- ಶಿಕ್ಷಕರು ಮೇಲಿನಂತೆ ಆಟದ ಬೋರ್ಡನ್ನು ಡ್ರಾಯಿಂಗ್ ಹಾಳೆಯಲ್ಲಿ ಬರೆದು ಸಿದ್ಧಪಡಿಸಿಕೊಳ್ಳಬೇಕು.
- ವಿದ್ಯಾರ್ಥಿಯು ಕೈಯಲ್ಲಿರುವ 4 ಹುಣಸೆ ಬೀಜವನ್ನು ಬೋರ್ಡಿನ ಮೇಲೆ ಚೆಲ್ಲಲು ತಿಳಿಸುವುದು.
- ಬಿಡಿ, ಹತ್ತು, ನೂರರ ಸ್ಥಾನದ ಮೇಲೆ ಬಿದ್ದ, ಬೀಜಗಳ ಸಂಖ್ಯೆಯನ್ನು ಸ್ಥಾನಬೆಲೆಗೆ ಅನುಗುಣವಾಗಿ ಬರೆದುಕೊಳ್ಳಲು ತಿಳಿಸುವುದು.
- ಗೆರೆಯ ಮೇಲೆ ಬೀಜ ಬಿದ್ದರೆ ಅದನ್ನು ಪರಿಗಣಿಸಬಾರದು.
- ಅದೇ 4 ಬೀಜಗಳನ್ನು ಬೋರ್ಡಿನ ಮೇಲೆ ಮತ್ತೆ ಚೆಲ್ಲಲು ಹೇಳಬೇಕು. ಬಿಡಿ, ಹತ್ತು, ನೂರರ ಸ್ಥಾನದಲ್ಲಿ ಬಿದ್ದ ಬೀಜಗಳ ಸಂಖ್ಯೆಯನ್ನು ಮೊದಲು ಬರೆದು ಸಂಖ್ಯೆಯ ಕೆಳಗೆ ಸ್ಥಾನಗಳಿಗೆ ಅನುಗುಣವಾಗಿ ಬರೆದುಕೊಳ್ಳಲು ತಿಳಿಸಬೇಕು.
- ಬರೆದುಕೊಂಡ ಸಂಖ್ಯೆಗಳನ್ನು ಕೂಡಿ ಮೊತ್ತ ಕಂಡುಹಿಡಿಯಲು ತಿಳಿಸುವುದು.
- ಇದೇ ರೀತಿ ಆಟ ಮುಂದುವರೆಸುವುದು.

**ಸೂಚನೆ :** 3 ವಿಸ್ತರಣಾ ರೂಪದ ಸಂಕಲನ, 2 ಕಂಬ ಸಾಲುಗಳಲ್ಲಿ ಸಂಕಲನ ಮತ್ತು 2 ಅಡ್ಡಸಾಲಿನಲ್ಲಿ ಸಂಕಲನದ ಲೆಕ್ಕಗಳನ್ನು ಮಾಡಿಸಬೇಕು.

| 8 | # ವಿನೋದ ಗಣಿತ | 132 |
|---|---|---|

ಸೂಚನೆ : ಕಾರ್ಡಿನ ಹಿಂಬದಿಯಲ್ಲಿರುವ ಸೂಚನೆಯಂತೆ ಆಟ ಆಡಿರಿ.



8



# ವಿನೋದ ಗಣಿತ

132

**ಸಾಮಗ್ರಿ :** ಆಟದ ಬೋರ್ಡ್, 330ರ ಒಳಗಿನ ಕ್ರಮೇನುಗತ 9 ಮಿಂಚು ಪಟ್ಟಿಗಳು.

**ಮಿಂಚುಪಟ್ಟಿಗಳು :**

| | | | | | | | | | |
|---|---|---|---|---|---|---|---|---|---|
| 1. | 228 | 229 | 230 | 232 | 233 | 234 | 235 | 236 | |
| 2. | 320 | 321 | 322 | 323 | 324 | 325 | 326 | 327 | 328 |
| 3. | 196 | 197 | 198 | 199 | 200 | 201 | 202 | 203 | 204 |

**ಆಟ ಆಡುವ ಕ್ರಮ :**

- 330ರ ಒಳಗಿನ ಕ್ರಮಾನುಗತ 9 ಸಂಖ್ಯೆಗಳ ಮಿಂಚುಪಟ್ಟಿಗಳನ್ನು ಬಳಸುವುದು.
- ಚಿತ್ರದಲ್ಲಿ ಬಾಣದ ಗುರುತಿನ ಮತ್ತು ಅಂಕಿಗಳ ಮೂಲಕ ಸೂಚಿಸಿರುವಂತೆ ವೃತ್ತಗಳಲ್ಲಿ ಕ್ರಮವಾಗಿ ಮಿಂಚುಪಟ್ಟಿಗಳನ್ನು ಜೋಡಿಸುವುದು.
- ಈಗ ಒಂದೇ ಸರಳರೇಖೆಯಲ್ಲಿ ಬರುವ 3 ಸಂಖ್ಯೆಗಳನ್ನು ಕೂಡಿಸಿ ಮೊತ್ತ ಕಂಡುಹಿಡಿಯುವುದು
- ಈ ಗಣಿತ ಮೋಜಿನ ವಿಶೇಷತೆಯನ್ನು ಶಿಕ್ಷಕರೊಂದಿ ಚರ್ಚಿಸಿ.

8



# ಮೌಲ್ಯಮಾಪನ

## ಸಂಕಲನ (ಮೊತ್ತ 900ಕ್ಕೆ ಮೀರದಂತೆ)

**133**

**ಸೂಚನೆ : ಈ ಕೆಳಗಿನ ಲೆಕ್ಕಗಳನ್ನು ಮಾಡು.**

1)
```
  456
+ 332
-----
-----
```

2)
```
  343
+ 536
-----
-----
```

3) 413 + 286 =

4) 544 + 424 =

5)
```
  346
+ 558
-----
-----
```

6)
```
  678
+ 247
-----
-----
```

7) 539 + 196 =

8) 384 + 628 =

**ವಿಸ್ತರಿಸಿ ಬರೆದು ಸಂಕಲನ ಮಾಡು.**

9)
```
  436
+ 543
-----
-----
```

10)
```
  385 =
+ 428 =
-----
-----
```

**ವಿಸ್ತರಿಸಿ ಬರೆದಿರುವುದನ್ನು ಸಂಕಲನ ಮಾಡಿ ಸಂಕ್ಷಿಪ್ತ ರೂಪದಲ್ಲಿ ಬರೆ.**

11)
```
  700+20+9 = [    ]
+200+70+0  = [    ]
-------------------
           = [    ]
```

12)
```
  300+40+3 = [    ]
+ 500+20+5 = [    ]
-------------------
           = [    ]
```

**ಈ ಕೆಳಗಿನ ಸಮಸ್ಯೆಗಳನ್ನು ಮಾಡು.**

13) ಆದರ್ಶನು ತನ್ನ ಪಾನೀಯದ ಅಂಗಡಿಯಲ್ಲಿ ಪಾನೀಯ ತಯಾರಿಸಲು 245 ಮಾವಿನ ಹಣ್ಣುಗಳನ್ನು, 152 ಸೇಬು ಸಣ್ಣುಗಳನ್ನು ಹಾಗೂ 196 ಕಿತ್ತಳೆ ಹಣ್ಣುಗಳನ್ನು ಕೊಂಡರೆ ಅವನು ಕೊಂಡ ಒಟ್ಟು ಹಣ್ಣುಗಳೆಷ್ಟು?

14) ನವ್ಯಳು ಅಂಚೆಕಛೇರಿಯ ಉಳಿತಾಯ ಖಾತೆಯಲ್ಲಿ 345ರೂ. ಗಳನ್ನು ಹಾಗೂ ಬ್ಯಾಂಕ್ ಉಳಿತಾಯ ಖಾತೆಯಲ್ಲಿ 286ರೂ. ಗಳನ್ನು ಜಮಾ ಮಾಡಿದರೆ ಅವಳು ಜಮಾ ಮಾಡಿದ ಒಟ್ಟು ಹಣವೆಷ್ಟು ?

| 9 | # ದಶಕ ರಹಿತ ವ್ಯವಕಲನ<br>(1 - 999) | 134 |
|---|---|---|

**ಉದ್ದೇಶ :** 1ರಿಂದ 999ರವರೆಗಿನ ವ್ಯವಕಲನದ ಕಲ್ಪನೆಯನ್ನು ಮೂಡಿಸುವುದು.





ಒಂದು ದೊಡ್ಡ ವೃತ್ತವನ್ನು ಬರೆದು ನೂರು ಕಡ್ಡಿಗಳ ಒಂಬತ್ತು ಕಟ್ಟುಗಳನ್ನು ಇಡಬೇಕು. ವಿದ್ಯಾರ್ಥಿಗಳನ್ನು ಎರಡು ಗುಂಪು ಮಾಡಿ ವೃತ್ತದ ಎರಡೂ ಬದಿಯಲ್ಲಿ ಸಮದೂರದಲ್ಲಿ ನಿಲ್ಲಿಸಬೇಕು. ಎರಡೂ ತಂಡದ ವಿದ್ಯಾರ್ಥಿಗಳಿಗೆ ಹೂವಿನ ಹೆಸರನ್ನು ಇಡಬೇಕು.

ಉದಾ : ಎ ತಂಡ : ಗುಲಾಬಿ, ಸಂಪಿಗೆ, ಮಲ್ಲಿಗೆ, ಕೇದಗೆ ಇತ್ಯಾದಿ

ಬಿ ತಂಡ : ಗುಲಾಬಿ, ಸಂಪಿಂಗೆ, ಮಲ್ಲಿಗೆ, ಕೇದಗೆ ಇತ್ಯಾದಿ

- ಶಿಕ್ಷಕರು ಯಾವುದಾದರೂ ಒಂದು ಹೂವಿನ ಹೆಸರು ಹೇಳಬೇಕು. ಆಗ ಎರಡು ತಂಡದಿಂದ ಅದೇ ಹೂವಿನ ಹೆಸರಿನವರು ಬಂದು ಶಿಕ್ಷಕರು ಹೇಳಿದಷ್ಟು ಕಟ್ಟುಗಳನ್ನು ವೃತ್ತದೊಳಗಿಂದ ಒಯ್ದು, ತಮ್ಮ ತಂಡದಲ್ಲಿ ನಿಲ್ಲುವುದು.

  ಉದಾ : ಗುಲಾಬಿ, ಎರಡು ಎಂದಾಗ ಎರಡು ತಂಡದ ಗುಲಾಬಿ ಹೆಸರಿನ ವಿದ್ಯಾರ್ಥಿಗಳು 2 ಕಟ್ಟು ತೆಗೆದುಕೊಂಡು ಹೋಗಬೇಕು.

- ನಂತರ ಈ ಹಂತಕ್ಕೆ ಬಂದ ವಿದ್ಯಾರ್ಥಿಯಿಂದ ಮೊದಲು ವೃತ್ತದಲ್ಲಿ ಎಷ್ಟು ನೂರರ ಕಟ್ಟುಗಳಿದ್ದವು 3 ಈಗ ಎಷ್ಟು ಉಳಿದಿವೆ ಎಂದು ಎಣಿಸಿ ಹೇಳಿಸಬೇಕು. ನಂತರ ಎಲ್ಲಾ ಮಕ್ಕಳಿಂದ ಹೇಳಿಸಬೇಕು.
- ಇದೇ ರೀತಿ ಆಟ ಮುಂದುವರಿಸುವುದು.



# ದಶಕ ರಹಿತ ವ್ಯವಕಲನ (ವ್ಯತ್ಯಾಸ 999ಕ್ಕೆ ಮೀರದಂತೆ)

9

135

**ಉದ್ದೇಶ :** 1ರಿಂದ 999ರವರೆಗಿನ ಸಂಖ್ಯೆಗಳನ್ನು ವಿಸ್ತರಿಸಿ ಬರೆಯುವದರ ಮೂಲಕ ಕಂಬಸಾಲು ಮತ್ತು ಅಡ್ಡಸಾಲಿನಲ್ಲಿ ದಶಕರಹಿತ ವ್ಯವಕಲನ ಮಾಡುವುದನ್ನು ಮನವರಿಕೆ ಮಾಡುವುದು.

| ಹಣ್ಣುಗಳು | ಸ್ಟಾಕ್ | ಮಾರಾಟ | ಉಳಿಕೆ |
|---|---|---|---|
| ಮಾವು | 748 | 335 | 413 |
| ಸಪೋಟಾ | 664 | 432 | |
| ಬಾಳೆ | 675 | 533 | |
| ಪಪ್ಪಾಯಿ | 944 | 712 | |
| ಸೇಬು | 584 | 331 | |
| ಮೋಸಂಬಿ | 694 | 453 | |



❖ ಅಂಗಡಿಯ ಮಾಲಿಕ, ಕೆಲಸಗಾರ ತಿಮ್ಮನನ್ನು ಕರೆದು ಯಾವ ಯಾವ ಹಣ್ಣುಗಳು ಎಷ್ಟೆಷ್ಟು ಉಳಿದಿವೆ? ಎಂದು ಸ್ಟಾಕ್ ಬೋರ್ಡಿನಲ್ಲಿ ಬರೆ ಬಂದು ಹೇಳಿದರು. ಆಗ ತಮ್ಮ ಅದನ್ನು ಹೇಗೆ ಬರೆಯುವುದು? ಎಂದು ಕೇಳಿದನು. ಆಗ ಮಾಲಿಕನು ನಿನ್ನೆಯದಿನ ಇದ್ದ ಹಣ್ಣುಗಳು ಎಷ್ಟು ಎಂದು ತಿಳಿದುಕೊಂಡು ನಂತರ ಮಾರಾಟವಾದ ಹಣ್ಣುಗಳು ಎಷ್ಟು ಎಂದು ತಿಳಿದು ಮಾರಾಟವಾದ ಹಣ್ಣುಗಳನ್ನು ಕಳೆದರೆ ಉಳಿದಿರುವ ಹಣ್ಣುಗಳು ಗೊತ್ತಾಗುತ್ತದೆ ಎಂದು ಕೆಲಗಾರನಿಗೆ ಹೇಳಿದರು. ಈಗ ನಾವು ಅಂಗಡಿಯ ಕೆಲಸಗಾರನಿಗೆ ಬರೆಯಲು ಸಹಾಯ ಮಾಡೋಣವೇ ?

**ಕಲಿಸುವ ಕ್ರಮ :**

**ಹಂತ-1 :**

❖ ಸ್ಥಾನ ಬೆಲೆಗೆ ಅನುಗುಣವಾಗಿ ಮೊದಲು ಸಂಖ್ಯೆಯನ್ನು ವಿಸ್ತರಣಾ ರೂಪದಲ್ಲಿ ಬರೆದುಕೊಂಡು ವ್ಯತ್ಯಾಸ ಕಂಡು ಹಿಡಿಯಲು ತಿಳಿಸುವುದು.

ನಿನ್ನೆ ಬೆಳಿಗ್ಗೆ ಇದ್ದ ಮಾವಿನ ಹಣ್ಣುಗಳು = 748 = 700 + 40 + 8

ಮಾರಾಟವಾದ ಮಾವಿನ ಹಣ್ಣುಗಳು = 335 = 300 + 30 + 5

413 = 400 + 10 + 3

9



# ವ್ಯವಕಲನ

## (ದಶಕ ರಹಿತ ವ್ಯವಕಲನ -ವ್ಯತ್ಯಾಸ 999ಕ್ಕೆ ಮೀರದಂತೆ)

**135**

**ಹಂತ-1 :**

ಈ ಮೇಲಿನ ಸಮಸ್ಯೆಯನ್ನೇ ಸಂಕ್ಷೇಪಿಸಿ ಕಂಬಸಾಲಿನಲ್ಲಿಯೂ ಸಹ ಈ ಕೆಳಗಿನಂತೆ ಬರೆದುಕೊಂಡು ವ್ಯವಕಲನ ಮಾಡಬಹುದಾಗಿದೆ ಎಂದು ತಿಳಿಸುತ್ತಾ....

| ನೂರು | ಹತ್ತು | ಬಿಡಿ |
|---|---|---|
| 7 | 4 | 8 |
| 3 | 3 | 5 |

- ಮೊದಲು ದೊಡ್ಡ ಸಂಖ್ಯೆಯನ್ನು ಸ್ಥಾನ ಬೆಲೆಗೆ ಅನುಗುಣವಾಗಿ ಬರೆದುಕೊಳ್ಳಲು ತಿಳಿಸುವುದು.
- ಚಿಕ್ಕ ಸಂಖ್ಯೆಯನ್ನು ಅದರ ಕೆಳಗೆ ಸ್ಥಾನ ಬೆಲೆಗೆ ಅನುಗುಣವಾಗಿ ಬರೆದುಕೊಳ್ಳಲು ತಿಳಿಸುವುದು.

- ಈಗ ಬಿಡಿ ಸ್ಥಾನದಿಂದ ಬಿಡಿಸ್ಥಾನದಲ್ಲಿರುವ ಹತ್ತರ ಸ್ಥಾನದಿಂದ ಹತ್ತರ ಸ್ಥಾನದಲ್ಲಿರುವ, ನೂರರ ಸ್ಥಾನದಿಂದ ನೂರರ ಸ್ಥಾನದ ಸಂಖ್ಯೆಗಳನ್ನು ಕಳೆದು ವ್ಯತ್ಯಾಸ ಬರೆದು ಬೇರೊಂದು ಮನವರಿಕೆ ಮಾಡಿಕೊಡುವುದು.

**ಹಂತ-3**

ಈ ಮೇಲಿನ ಸಮಸ್ಯೆಯನ್ನೇ ಅಡ್ಡಸಾಲಿನಲ್ಲೂ ಬರೆದುಕೊಂಡು ವ್ಯತ್ಯಾಸ ಕಂಡುಹಿಡಿಯ ಬಹುದಾಗಿದೆ ಎಂದು ತಿಳಿಸುವುದು.

ನೂ ಹ ಬಿ    ನೂ ಹ ಬಿ    ನೂ ಹ ಬಿ

7 4 8 – 3 3 5 = | 4 | 1 | 3 |

- ಬಿಡಸ್ಥಾನದ ಅಂಕೆಯಿಂದ ಬಿಡಿಸ್ಥಾನದ ಅಂಕೆಯನ್ನು, ಹತ್ತರಸ್ಥಾನದ ಅಂಕಿಯಿಂದ ಹತ್ತರ ಸ್ಥಾನದ ಅಂಕೆಯನ್ನು ನೂರರ ಸ್ಥಾನದ ಅಂಕಿಯಿಂದ ನೂರು ಸ್ಥಾನದ ಅಂಕಿಯನ್ನು ಕಳೆದು ವ್ಯತ್ಯಾಸವನ್ನು ಸ್ಥಾನಗಳಿಗೆ ಅನುಗುಣವಾಗಿ ಬರೆಸಿ ಸ್ಪಷ್ಟಪಡಿಸುವುದು.

9



# ಮೌಖಿಕ ಲೆಕ್ಕಗಳು (1-999)

**140**

1) ಭೀಮನು ಪಕ್ಕದ ಊರಿನ ಸಂತೆಯಿಂದ 800 ಬಾಳೆಹಣ್ಣುಗಳನ್ನು ಕೊಂಡು ತಂದನು. ಅದರಲ್ಲಿ 500 ಬಾಳೆ ಹಣ್ಣುಗಳನ್ನು ಶಾಲಾ ಮಕ್ಕಳಿಗೆ ಹಂಚಿದರೆ ಆತನಲ್ಲಿ ಉಳಿಯುವ ಹಣ್ಣುಗಳೆಷ್ಟು ?

2) ಕಲಾಳು ತನ್ನ ಹುಟ್ಟು ಹಬ್ಬದ ಸವಿನೆನಪಿಗಾಗಿ ಬೇಕರಿಗೆ ಹೋಗಿ 500 ಲಾಡುಗಳನ್ನು ತಂದು ಅದರಲ್ಲಿ 400 ಲಾಡುಗಳನ್ನು ಶಾಲಾ ವಿದ್ಯಾರ್ಥಿಗಳಿಗೆ ಹಂಚಿದರೆ ಅವಳ ಬಳಿಯಲ್ಲಿ ಉಳಿಯುವ ಲಾಡುಗಳೆಷ್ಟು ?

3) ಹೊನ್ನವಳ್ಳಿ ಗ್ರಾಮದಲ್ಲಿರುವ ಒಟ್ಟು ಮತದಾರರ ಸಂಖ್ಯೆ 900 ಅದರಲ್ಲಿ 400 ಮತದಾರರು ಹೆಂಗಸರಾದರೆ ಗಂಡಸರ ಸಂಖ್ಯೆ ಎಷ್ಟು ?

4) ರಾಜುವಿನ ತಂದೆ 678 ಮಾವಿನ ಹಣ್ಣುಗಳನ್ನು ಗೋಳಿಯಂಗಡಿ ಸಂತೆಯಲ್ಲಿ ಮಾರಾಟ ಮಾಡಲು ತಂದನು. ಆ ದಿನ ಅವುಗಳಲ್ಲಿ 78 ಹಣ್ಣುಗಳು ಮಾರಾಟವಾದರೆ ಉಳಿದಿರುವ ಹಣ್ಣುಗಳೆಷ್ಟು ?

5) ರಾಜೇಶನು 500 ಅಡಿಕೆ ಮೂಟೆಗಳನ್ನು ಶಿವಮೊಗ್ಗ ಮಂಡಿಗೆ ತಂದನು. ಆದರೆ ಅಡಿಕೆ ಮಂಡಿಯವರು 238 ಅಡಿಕೆ ಮೂಟೆಗಳನ್ನು ಖರೀದಿಸಿದರು. ಹಾಗಾದರೆ ರಾಜೇಶನ ಬಳಿ ಉಳಿದ ಅಡಿಕೆ ಮೂಟೆಗಳು ಎಷ್ಟು?

9



# ದಶಕ ಸಹಿತ ವ್ಯವಕಲನ (ವ್ಯತ್ಯಾಸ 999ಕ್ಕೆ ಮೀರದಂತೆ)

142

**ಉದ್ದೇಶ :** 1 ರಿಂದ 999ರವರೆಗಿನ ಸಂಖ್ಯೆಗಳನ್ನು ವಿಸ್ತರಿಸಿ ಬರೆದು ವ್ಯವಕಲನ ಮತ್ತು ಕಂಬಸಾಲು ಹಾಗೂ ಅಡ್ಡಸಾಲುಗಳಲ್ಲಿ ವ್ಯವಕಲನ.

ಶರಣ ಬಸವೇಶ್ವರರ ಜಾತ್ರೆಗೆಂದು ರಾಮಣ್ಣ 935 ತೆಂಗಿನ ಕಾಯಿಗಳನ್ನು ಮಾರಾಟಕ್ಕೆಂದು ದೇವಸ್ಥಾನದ ಮುಂದಿಟ್ಟು ಮಾರಾಟ ಮಾಡುತ್ತಿದ್ದ. ಸಂಜೆಯ ವೇಳೆಗೆ 679 ತೆಂಗಿನ ಕಾಯಿಗಳನ್ನು ಮಾರಾಟ ಮಾಡಿದ್ದಾನೆ. ಈಗ ಉಳಿದ ತೆಂಗಿನ ಕಾಯಿಗಳನ್ನು ಲೆಕ್ಕ ಹಾಕಲು ರಾಮಣ್ಣನಿಗೆ ಸಹಕರಿಸು.

### ಹಂತ - 1

### 1) ವಿಸ್ತರಣಾ ರೂಪದ ವ್ಯವಕಲನ

| | | | |
|---|---|---|---|
| | ಮಾರಾಟಕ್ಕೆಂದು ತಂದ ತೆಂಗಿನಕಾಯಿಗಳು | = 935 | = 900 + 30 + 5 |
| – | ಮಾರಾಟವಾದ ತೆಂಗಿನಕಾಯಿಗಳು | = 679 | = 600 + 70 + 9 |
| | ಉಳಿದ ತೆಂಗಿನ ಕಾಯಿಗಳು | = 256 | = 200 + 50 + 6 |

- ಬಿಡಿ ಸ್ಥಾನದಿಂದ ಕಳೆಯಲು ತಿಳಿಸುವುದು.
- ಚಿಕ್ಕ ಸಂಖ್ಯೆಯಿಂದ ದೊಡ್ಡ ಸಂಖ್ಯೆಯನ್ನು ಕಳೆಯಲು ಸಾಧ್ಯವಾಗದೇ ಇದ್ದಾಗ ಮುಂದಿನ ಸ್ಥಾನದಿಂದ ದಶಕ ತೆಗೆದುಕೊಂಡು ಕಳೆಯಬೇಕು ಎಂದು ತಿಳಿಸುವುದು.
- ಹಾಗೆಯೇ ಹತ್ತು ಮತ್ತು ನೂರರ ಸ್ಥಾನದ ಸಂಖ್ಯೆಗಳನ್ನು ಕಳೆದು ಸ್ಥಾನಕ್ಕನುಗುಣವಾಗಿ ಬರೆದು ವ್ಯತ್ಯಾಸ ಕಂಡುಹಿಡಿಯಬೇಕೆಂದು ಮನವರಿಕೆ ಮಾಡಿಕೊಡುವುದು.

### 2) ಹಂತ-2

### ಕಂಬಸಾಲಿನಲ್ಲಿ ವ್ಯವಕಲನ :

| ನೂರು | ಹತ್ತು | ಬಿಡಿ |
|---|---|---|
| 9 | 3 | 5 |
| – 6 | 7 | 9 |
| 2 | 5 | 6 |

- ಬಿಡಿಸ್ಥಾನದಿಂದ ಕಳೆಯಲು ಪ್ರಾರಂಭಿಸಬೇಕೆಂದು ತಿಳಿಸುವುದು.
- ಚಿಕ್ಕ ಸಂಖ್ಯೆಯಿಂದ ದೊಡ್ಡ ಸಂಖ್ಯೆಯನ್ನು ಕಳೆಯಲು ಸಾಧ್ಯವಿಲ್ಲದ ಕಾರಣ ಮುಂದಿನ ಸ್ಥಾನದಿಂದ ದಶಕ ತೆಗೆದುಕೊಂಡು ಕಳೆಯಲು ತಿಳಿಸುವುದು.
- ಹಾಗೆಯೇ ಹತ್ತು ಮತ್ತು ನೂರರ ಸ್ಥಾನದ ಸಂಖ್ಯೆಗಳನ್ನು ಕಳೆದು ಸ್ಥಾನಕ್ಕನುಗುಣವಾಗಿ ವ್ಯತ್ಯಾಸ ಬರೆಯುವಂತೆ ತಿಳಿಸಿ ಸ್ಪಷ್ಟಪಡಿಸುವುದು.

### 3) ಹಂತ-3

### ಅಡ್ಡಸಾಲಿನಲ್ಲಿ ವ್ಯವಕಲನ

- ಯಾವ ಸ್ಥಾನದಿಂದ ಕಳೆಯುವ ಕ್ರಿಯೆ ಆರಂಭಿಸಬೇಕು ಎಂದು ಪ್ರಶ್ನಿಸಿ, ಉತ್ತರ ಪಡೆಯಬೇಕು.
- ಯಾವ ಸ್ಥಾನದಲ್ಲಿಯೂ ಚಿಕ್ಕ ಸಂಖ್ಯೆಯಿಂದ ದೊಡ್ಡ ಸಂಖ್ಯೆ ಕಳೆಯಬೇಕಾದ ಸಂದರ್ಭದಲ್ಲಿ ಮುಂದಿನ ಸ್ಥಾನದಿಂದ ದಶಕ ತೆಗೆದುಕೊಳ್ಳುವಂತೆ ಸ್ಪಷ್ಟಪಡಿಸುವುದು.
- ಹಾಗೆಯೇ ಹತ್ತು ಮತ್ತು ನೂರರ ಸ್ಥಾನದಲ್ಲಿಯು ಕಳೆಯುವ ಕ್ರಿಯೆ ಮಾಡಿ ಸ್ಥಾನಕ್ಕೆ ಅನುಗುಣವಾಗಿ ಬರೆಯುವುದನ್ನು ಸ್ಪಷ್ಟಪಡಿಸುವುದು.

9



# ದಶಕ ಸಹಿತ ವ್ಯವಕಲನ ಆಟ (1-999)

148

**ಉದ್ದೇಶ :** 1-999ರವರೆಗಿನ ದಶಕ ಸಹಿತ ವ್ಯವಕಲನ ಮಾಡುವುದು.

**ಸಾಮಗ್ರಿ :** ಬೇರೆ ಬೇರೆ ಬಣ್ಣದ 2 ದಾಳಗಳು

**ದಾಳಗಳ ಮೇಲೆ ಬರೆಯಬೇಕಾದ ಸಂಖ್ಯೆಗಳು :**

1ನೇ ದಾಳ - 927, 836, 810, 712, 742, 905

2ನೇ ದಾಳ - 569, 698, 537, 509, 659, 599

**ಆಡುವ ಕ್ರಮ :**

- ಎರಡು ದಾಳಗಳನ್ನು ನೆಲದ ಮೇಲೆ ಹಾಕುವುದು.
- ಮೇಲ್ಮುಖವಾಗಿ ಬಿದ್ದ ದೊಡ್ಡ ಸಂಖ್ಯೆಗಳನ್ನು ಮೊದಲು ಬರೆದುಕೊಳ್ಳುವುದು.
- ಚಿಕ್ಕ ಸಂಖ್ಯೆಯನ್ನು ಸ್ಥಾನ ಬೆಲೆಗನುಗುಣವಾಗಿ ಬರೆದುಕೊಂಡು ವ್ಯವಕಲನ ಮಾಡುವುದು.
- ಸಮಸ್ಯೆಗಳನ್ನು ನೋಟ್‌ಪುಸ್ತಕ/ವಾಲ್‌ಸ್ಲೇಟ್‌ನಲ್ಲಿ ಬರೆದು ವ್ಯವಕಲನ ಮಾಡುವುದು.

9 

# ಮೋಜಿನ ಗಣಿತ (1-999)

149

**ಉದ್ದೇಶ : ಅಂಕೆಗಳಿಂದ ಸಂಖ್ಯೆಗಳನ್ನು ರಚಿಸಿ ದೊಡ್ಡಸಂಖ್ಯೆಯಿಂದ ಚಿಕ್ಕ ಸಂಖ್ಯೆಯನ್ನು ಕಳೆಯುವುದು.**

100 ರಿಂದ 999ರವರೆಗಿನ ಯಾವುದಾದರೂ ಒಂದು ಸಂಖ್ಯೆಯನ್ನು ತೆಗೆದುಕೊಳ್ಳುವುದು. ಆದರೆ ಆ ಸಂಖ್ಯೆಯಲ್ಲಿನ ಅಂಕಿಗಳು ಒಂದೇ ಆಗಿರಬಾರದು. ಉದಾ : 435 ಈ ಸಂಖ್ಯೆಯನ್ನು ಬಳಸಿ, ದೊಡ್ಡ ಸಂಖ್ಯೆಯಿಂದ ಅತೀ ಚಿಕ್ಕ ಸಂಖ್ಯೆಯನ್ನು ಕಳೆಯುವುದು. ಹೀಗೆಯೇ ಮಾಡುತ್ತಾ ಮುಂದುವರೆದಾಗ ಕೊನೆಯಲ್ಲಿ 495 ಉತ್ತರ ಬರುತ್ತದೆ.

**ಮಾದರಿ :** 4, 3, 5

| | | |
|---|---|---|
| ಈ ಅಂಕಿಗಳನ್ನು ಬಳಸಿ ಮಾಡಬಹುದಾದ ಅತೀ ದೊಡ್ಡ ಸಂಖ್ಯೆ | : | 543 |
| ಈ ಅಂಕಿಗಳನ್ನು ಬಳಸಿ ಮಾಡಬಹುದಾದ ಅತೀ ಚಿಕ್ಕ ಸಂಖ್ಯೆ | : | 345 |
| | | 198 |
| 1, 9, 8 ಈ ಅಂಕಿಗಳನ್ನು ಬಳಸಿ ಮಾಡಬಹುದಾದ ಅತೀ ದೊಡ್ಡ ಸಂಖ್ಯೆ | : | 981 |
| ಈ ಅಂಕಿಗಳನ್ನು ಬಳಸಿ ಮಾಡಬಹುದಾದ | : | 189 |
| | | 792 |
| 7, 9, 2 ಈ ಅಂಕಿಗಳಿಂದಾಗುವ ದೊಡ್ಡ ಸಂಖ್ಯೆ | : | 972 |
| ಈ ಅಂಕಿಗಳಿಂದಾಗುವ ಚಿಕ್ಕ ಸಂಖ್ಯೆ | : | 279 |
| | | 693 |
| 6, 9, 3 ಈ ಅಂಕಿಗಳಿಂದಾಗುವ ದೊಡ್ಡ ಸಂಖ್ಯೆ | : | 963 |
| ಈ ಅಂಕಿಗಳಿಂದಾಗುವ ಚಿಕ್ಕ ಸಂಖ್ಯೆ | : | 369 |
| | | 594 |
| 5, 9, 4 ಈ ಅಂಕಿಗಳಿಂದಾಗುವ ದೊಡ್ಡ ಸಂಖ್ಯೆ | : | 954 |
| ಈ ಅಂಕಿಗಳಿಂದಾಗುವ ಚಿಕ್ಕ ಸಂಖ್ಯೆ | : | 459 |
| | | 495 |

ಇದೇ ರೀತಿ ಆಟಗಳನ್ನು ಆಡುವುದು. ಇದನ್ನು ವಾಲ್‌ಸ್ಲೇಟ್/ನೋಟ್‌ಪುಸ್ತಕದಲ್ಲಿ

| 9 | ವ್ಯವಕಲನ | 150 |
|---|---|---|

**I. ಈ ಕೆಳಗಿನ ಲೆಕ್ಕಗಳನ್ನು ವಿಸ್ತರಿಸಿ ಬರೆದು ವ್ಯವಕಲನ ಮಾಡು.**

1) $\begin{array}{r} 854 \\ -\ 431 \\ \hline \\ \hline \end{array}$ 2) $\begin{array}{r} 734 \\ -\ 597 \\ \hline \\ \hline \end{array}$

**II. ಈ ಕೆಳಗಿನ ಲೆಕ್ಕಗಳನ್ನು ಕಂಬಸಾಲುಗಳಲ್ಲಿ ವ್ಯವಕಲನ ಮಾಡು.**

1) $\begin{array}{r} 897 \\ -\ 453 \\ \hline \\ \hline \end{array}$ 2) $\begin{array}{r} 988 \\ -\ 105 \\ \hline \\ \hline \end{array}$ 3) $\begin{array}{r} 923 \\ -\ 369 \\ \hline \\ \hline \end{array}$ 4) $\begin{array}{r} 843 \\ -\ 164 \\ \hline \\ \hline \end{array}$

**III. ಈ ಕೆಳಗಿನ ಲೆಕ್ಕಗಳನ್ನು ಅಡ್ಡಸಾಲುಗಳಲ್ಲಿ ವ್ಯವಕಲನ ಮಾಡು.**

1) 945 – 632 = ☐

2) 896 – 544 = ☐

3) 872 – 681 = ☐

4) 694 – 378 = ☐

**IV. ಈ ಕೆಳಗಿನ ಸಮಸ್ಯೆಗಳನ್ನು ಬಿಡಿಸು.**

1) ಕೇಶವನ ಅಂಗಡಿಯಲ್ಲಿ 780 ಗುಲಾಬಿ ಹೂಗಳಿದ್ದವು. ಅದರಲ್ಲಿ 675 ಗುಲಾಬಿ ಹೂವುಗಳನ್ನು ಮಾರಾಟ ಮಾಡಿದನು. ಹಾಗಾದರೆ ಉಳಿದ ಗುಲಾಬಿ ಗಿಡಗಳು ಎಷ್ಟು ?

2) ತಿಮ್ಮಕ್ಕ ಹಾಲು ಮಾರಿ ತಿಂಗಳಿಗೆ 990ರೂ. ಗಳನ್ನು ಗಳಿಸುತ್ತಾಳೆ. ಪ್ರತಿ ತಿಂಗಳು 575 ರೂ.ಗಳನ್ನು ಖರ್ಚು ಮಾಡುತ್ತಾಳೆ. ಹಾಗಾದರೆ ತಿಮ್ಮಕ್ಕಳ ಬಳಿ ಉಳಿಯುವ ಹಣವೆಷ್ಟು ?

10

# ಮಿಶ್ರಕ್ರಿಯೆ (1-999)

151

## ಕುಂಟ ಬಿಲ್ಲೆ ಆಟ

**ಉದ್ದೇಶ :** 1-999ರವರೆಗಿನ ಸಂಖ್ಯೆಗಳ ಮಿಶ್ರಕ್ರಿಯೆ ಲೆಕ್ಕಗಳನ್ನು ಮಾಡುವ ಕೌಶಲ ಬೆಳೆಸುವುದು.

**ಸಾಮಗ್ರಿ :** ಚಪ್ಪಟೆ ಚಿಕ್ಕ ಕಲ್ಲು, ಸಂಖ್ಯಾ ಕಾರ್ಡುಗಳು

**ಆಡುವ ಕ್ರಮ :**






- ನೆಲದ ಮೇಲೆ ಈ ಮೇಲಿನ ಚಿತ್ರದಂತೆ ಮನೆಗಳನ್ನು ರಚಿಸಿಕೊಳ್ಳಬೇಕು.
- ಅದರ ಒಳಗೆ 1-999ರಲ್ಲಿನ ಯಾವುದಾದರೂ ಸಂಖ್ಯೆಗಳನ್ನು ಬರೆಯಬೇಕು ಅಥವಾ ಸಂಖ್ಯಾ ಕಾರ್ಡುಗಳನ್ನಿಡಬೇಕು.
- 1 ಮೀಟರ್ ದೂರದಲ್ಲಿ ಚಪ್ಪಟೆಯಾದ ಚಿಕ್ಕ ಕಲ್ಲನ್ನು 1ನೇ ಮನೆಗೆ ಎಸೆಯಬೇಕು.
- 1ನೇ ಮನೆಯ ಸಂಖ್ಯೆಯನ್ನು ಬರೆದಿಟ್ಟುಕೊಂಡ, ನಂತರ ಒಂಟಿ ಕಾಲಿನಿಂದ ಮುಂದಿನ ಮನೆಗೆ ಚಪ್ಪಟೆ ಕಲ್ಲನ್ನು ದೂಡಬೇಕು. ಹಾಗೂ ಈ ಮನೆಯ ಸಂಖ್ಯೆ ಬರೆದುಕೊಳ್ಳಬೇಕು. ನಂತರ 2 ಸಂಖ್ಯೆಗಳನ್ನು ಕೂಡಬೇಕು.
- ನಂತರ ಮತ್ತೊಂದು ಮನೆಗೆ ಚಪ್ಪಟೆ ಕಲ್ಲನ್ನು ಒಂಟಿ ಕಾಲಿನಿಂದ ದೂಡಬೇಕು. ಆ ಮನೆಯ ಸಂಖ್ಯೆಯನ್ನು ಬಂದಿರುವ ಮೊತ್ತದಿಂದ ಕಳೆಯಬೇಕು.

**ಹೀಗೆ ಆಟವನ್ನು ಮುಂದುವರಿಸಬೇಕು.**

**ಉದಾ :** 1ನೇ ಮನೆ 100 — 100+80=180

2ನೇ ಮನೆ 80 — 180-110=70

3ನೇ ಮನೆ 110

- ಕಾಲಿನಿಂದ ಕಲ್ಲನ್ನು ದೂಡುವಾಗ ಅದು ಮನೆಯಿಂದ ಹೊರಗೆ ಹೋದರೆ ಆ ವಿದ್ಯಾರ್ಥಿ ಔಟ್ ಆಡುತ್ತಾನೆ/ಳೆ. ಮತ್ತೊಬ್ಬ ವಿದ್ಯಾರ್ಥಿ ಆಟ ಮುಂದುವರಿಸಬೇಕು.

10

+ - x ÷

# ಮಿಶ್ರಕ್ರಿಯೆ (1-999)

152

**ಉದ್ದೇಶ :** 1-999ರವರೆಗಿನ ಸಂಖ್ಯೆಗಳ ಮಿಶ್ರಕ್ರಿಯೆ ಸಮಸ್ಯೆಗಳನ್ನು ಬಿಡಿಸುವ ಸಾಮರ್ಥ್ಯ ಬೆಳೆಸುವುದು.




ಭಾರತ ಮತ್ತು ಬಾಂಗ್ಲಾದೇಶಗಳ ತಂಡಗಳ ನಡುವೆ ಟೆಸ್ಟ್ ಪಂದ್ಯ ನಡೆಯುತ್ತಿದೆ. ರಮೇಶ, ಅವನ ತಂದೆ ಮತ್ತು ಅವನ ಅಣ್ಣ ಪಂದ್ಯವನ್ನು ವೀಕ್ಷಣೆ ಮಾಡುತ್ತಿದ್ದಾರೆ. ಭಾರತ ತಂಡ ಮೊದಲನೇ ಇನ್ನಿಂಗ್ಸ್‌ನಲ್ಲಿ 350ರನ್ ಹಾಗೂ ಎರಡನೇ ಇನ್ನಿಂಗ್ಸ್‌ನಲ್ಲಿ 296 ರನ್‌ಗಳನ್ನು ಗಳಿಸಿದ್ದರು. ಬಾಂಗ್ಲಾದೇಶದ ತಂಡ ಎರಡೂ ಇನ್ನಿಂಗ್ಸ್‌ಗಳಲ್ಲೂ ಸೇರಿ 495ರನ್‌ಗಳನ್ನು ಮಾತ್ರ ಗಳಿಸಿ ಪಂದ್ಯದಲ್ಲಿ ಸೋಲನ್ನನುಭವಿಸಿತು. ರಮೇಶನ ತಂದೆ ರಮೇಶನನ್ನು ಭಾರತತಂಡ ಗಳಿಸಿದ ಒಟ್ಟೂ ರನ್‌ಗಳೆಷ್ಟು ? ಹಾಗೂ ಬಾಂಗ್ಲಾ ತಂಡ ಎಷ್ಟು ರನ್‌ಗಳಿಂದ ಸೋಲನ್ನನುಭವಿಸಿತು ಹೇಳಬಲ್ಲೆಯಾ? ಎಂದು ಕೇಳಿದರು. ನಾವು ರಮೇಶನಿಗೆ ಸಹಕರಿಸೋಣ.

**ಕಲಿಸುವ ಕ್ರಮ :** ಮೊದಲು ಸಮಸ್ಯೆಯನ್ನು ಹೀಗೆ ಬರೆದುಕೊಳ್ಳಲು ಹೇಳುವುದು.

| | | |
|---|---|---|
| ❖ ಹಂತ - 1 ಭಾರತ ತಂಡ ಮೊದಲನೇ ಇನ್ನಿಂಗ್ಸ್‌ನಲ್ಲಿ ಪಡೆದ ರನ್‌ಗಳು | = | 350 |
| 2ನೇ ಇನ್ನಿಂಗ್ಸ್‌ನಲ್ಲಿ ಪಡೆದ ರನ್‌ಗಳು | = | 296 |
| ಭಾರತ ತಂಡ ಪಡೆದ ಒಟ್ಟು ರನ್‌ಗಳು | = | 646 |
| ❖ ಹಂತ - 2 ಬಾಂಗ್ಲಾ ತಂಡ 2 ಇನ್ನಿಂಗ್ಸ್‌ನಲ್ಲಿ ಪಡೆದ ಒಟ್ಟು ರನ್‌ಗಳು | = | 495 |
| ❖ ಹಂತ -3 ಬಾಂಗ್ಲಾ ತಂಡ ಸೋಲನ್ನನುಭವಿಸಿದ ರನ್‌ಗಳು | = | 151 |

- ❖ ಸಮಸ್ಯೆಯನ್ನು ಗಣಿತದ ವಾಕ್ಯದ ರೂಪದಲ್ಲಿ ಬರೆದು ಕೊಳ್ಳಲು ತಿಳಿಸುವುದು.
- ❖ ಬರೆದುದನ್ನು ಓದಲು ಹೇಳುವುದು.
- ❖ ಸಮಸ್ಯೆಯಲ್ಲಿ ಎಷ್ಟು ಕ್ರಿಯೆಗಳಿವೆ ಎಂದು ಕೇಳಿ ಉತ್ತರ ಪಡೆಯುವುದು.
- ❖ ಮೊದಲ ಎರಡು ಸಂಖ್ಯೆಗಳನ್ನು ಕೂಡಿ ಬಂದ ಉತ್ತರದಿಂದ ನಂತರದ ಸಂಖ್ಯೆಯನ್ನು ಕಳೆಯಬೇಕು.

10



# ಮಿಶ್ರಕ್ರಿಯೆ

157

**I. ಈ ಕೆಳಗಿನ ಲೆಕ್ಕಗಳನ್ನು ಮಾಡು.**

1) 436 + 134 − 215 =

2) 524 + 216 − 300 =

3) 372 + 328 − 400 =

4) 600 + 300 − 250 =

5) 350 + 425 − 504 =

**II. ಕೆಳಗಿನ ಲೆಕ್ಕಗಳಲ್ಲಿ ಉತ್ತರಗಳು ಸರಿಯೋ ತಪ್ಪೊ ತಿಳಿಸು.**

1) 295 + 175 − 150 = 195

2) 369 + 191 − 325 = 235

3) 460 + 213 − 215 = 458

4) 783 + 167 − 570 = 640

**III. ಈ ಕೆಳಗಿನ ಸಮಸ್ಯೆಯನ್ನು ಬಿಡಿಸು.**

1) ವಿಲಿಯಂನು ಒಂದು ಅಂಗಡಿಯಿಂದ 320 ಬಾಳೆಹಣ್ಣುಗಳನ್ನು, ಮತ್ತೊಂದು ಅಂಗಡಿಯಿಂದ 545 ಬಾಳೆಹಣ್ಣುಗಳನ್ನು ತಂದನು. ತನ್ನ ಮಗನ ಹುಟ್ಟಿದ ಹಬ್ಬದ ದಿನ ಬಂದವರಿಗೆ 450 ಬಾಳೆ ಹಣ್ಣುಗಳನ್ನು ಹಂಚಿದರೆ ಅವನಲ್ಲಿ ಉಳಿದ ಬಾಳೆ ಹಣ್ಣುಗಳೆಷ್ಟು ?

10



# ನೆನಪಿನ ಆಟ

158

**ಸೂಚನೆ :** ನೋಟ್‌ಪುಸ್ತಕ / ವಾಲ್‌ಸ್ಲೇಟ್‌ನಲ್ಲಿ ಸಮಸ್ಯೆ ಬರೆದು ಬಿಡಿಸು.

**30**
ಹಾಡು
ಕೋಗಿಲೆ

**29**
ಲೆಕ್ಕಮಾಡು
436+400-39

**28**
ಈ ಸಂಖ್ಯೆಗಳನ್ನು ಕೂಡಿಸಿ ಉತ್ತರದಿಂದ ಕಳೆ ಮೊದಲ ಸಂಖ್ಯೆಯಿಂದಕಳೆ
166
+147

**27**
ಮಿಶ್ರಕ್ರಿಯೆ
544+150-600

**26**
ಕಳೆಯಿರಿ
890
- 489

**21**
ವ್ಯವಕಲನ ಮಾಡು
975-450= ☐

**22**
ವಿಸ್ತರಿಸಿ ಬರೆದು ಕೂಡಿಸು.
715
245

**23**
ಮಗ್ಗಿ ಬರೆ
9 X 2 = ☐

**24**

**25**
ಕೋಷ್ಟಕದಲ್ಲಿ ಬರೆ
925

| ನೂ | ಹ | ಬಿ |
|---|---|---|
| | | |

**20**

**19**
ಲೆಕ್ಕಮಾಡು
154
265
100

**18**
ವಿಸ್ತರಿಸಿ ಬರೆ
852 =
593 =

**17**
ಲೆಕ್ಕಮಾಡು
717+217-517

**16**
ಪ್ರತೀ ಅಂಕೆಯ ಸ್ಥಾನ ಬೆಲೆ ಬರೆ
626

**11**
ಸ್ಥಾನಬೆಲೆ ಕೋಷ್ಟಕದಲ್ಲಿ ಬರೆ
841

| ನೂ | ಹ | ಬಿ |
|---|---|---|
| | | |

**12**

**13**
ಲೆಕ್ಕಮಾಡು
555
265
+ 125

**14**
ಲೆಕ್ಕಮಾಡು
965
-541

**15**
ವಿಸ್ತರಿಸಿ ಬರೆ
715 =
630 =

**10**
ಸಂಖ್ಯೆಗಳ ಮಧ್ಯೆ ಸೂಕ್ತ ಚಿಹ್ನೆ ಹಾಕು
765 ☐ 461

**9**
ಎಣಿಸಿ ಬರೆ




ಕಟ್ಟುಗಳು

**8**
ಏರಿಕೆ ಕ್ರಮದಲ್ಲಿ ಬರೆ
571, 632, 725, 681, 535

**7**
ಗರಿಷ್ಠ ಸಂಖ್ಯೆಗೆ ವೃತ್ತಹಾಕು
565, 990
842, 720, 680

**6**
ಇಳಿಕೆ ಕ್ರಮದಲ್ಲಿ ಬರೆ.
895, 534, 999,
621, 750

**1**
ಕಟ್ಟುಗಳನ್ನು ಎಣಿಸಿ ಬರೆ




**2**
ಹಿಂದೆ ಮುಂದೆ ಮಧ್ಯದ ಸಂಖ್ಯೆ ಬರೆ
769

**3**
ಸಂಖ್ಯೆಗಳ ಮಧ್ಯೆ ಚಿಹ್ನೆ ಹಾಕು
884 ☐ 962

**4**

**5**
ಕನಿಷ್ಠ ಸಂಖ್ಯೆಗೆ ವೃತ್ತ ಹಾಕು
615, 848, 525,
561, 735

10



# ನೆನಪಿನ ಆಟ

158

**ಉದ್ದೇಶ :** ಕಲಿಕೆಯ ಪುನರ್ಬಲನ ಮತ್ತು ಮೌಲ್ಯಮಾಪನಕ್ಕಾಗಿ.

**ಸಾಮಗ್ರಿ :** ನೆನಪಿನ ಆಟದ ಬೋರ್ಡ್, ಡೈಸ್, ಬಣ್ಣದ ಗುಂಡಿಗಳು.

**ಸೂಚನೆ :** 1. ಈ ಆಟವನ್ನು ಕನಿಷ್ಠ ಇಬ್ಬರು, ಗರಿಷ್ಠ 4 ವಿದ್ಯಾರ್ಥಿಗಳು ಆಡಬಹುದು.

2. ವಿದ್ಯಾರ್ಥಿಗಳು ಆಟವಾಡುವಾಗ ನೋಟ್‌ಪುಸ್ತಕ/ವಾಲ್‌ಸ್ಲೇಟ್‌ನಲ್ಲಿ ಸಮಸ್ಯೆಗಳನ್ನು ಬರೆದುಕೊಂಡು ಬಿಡಿಸುವುದು.

**ಆಡುವ ಕ್ರಮ :**

1. ಆಟಗಾರರು ತನ್ನ ಸರದಿ ಬಂದಾಗ ಡೈಸಿನ ಮೇಲ್ಭಾಗದಲ್ಲಿ 1, 2 ಬಂದು ಡೈಸ್ ಬಿಟ್ಟು, ಮೇಲ್ಮುಖವಾಗಿ ಬಿದ್ದ ಅಂಕಿಯನ್ನು ತಿಳಿದುಕೊಂಡು ಅಷ್ಟು ಮನೆಗಳನ್ನು ತಲುಪಿ ತನ್ನ ಗುಂಡಿಯನ್ನು ಇಡುವುದು.
2. ಗುಂಡಿ ಇರಿಸಿದ ಮನೆಯಲ್ಲಿ ಸಮಸ್ಯೆ ಇದ್ದರೆ ಆ ಸಮಸ್ಯೆಯನ್ನು ಬರೆದುಕೊಂಡು ಬಿಡಿಸಬೇಕು.
3. ಏಣಿಯ ತಳಭಾಗ ಮತ್ತು ಹಾವಿನ ಬಾಯಿಯಿರುವ ಮನೆಗೆ ಗುಂಡಿ ಬಂದಾಗ ಸಂಖ್ಯೆಯನ್ನು ಬರೆದುಕೊಂಡು ಸರಿಯಾಗಿ ಬಿಡಿಸಿದರೆ ಮಾತ್ರ ಏಣಿಯನ್ನು ಏರುತ್ತಾ ಅದರ ಕೊನೆಯ ಮುಟ್ಟುವ ಮನೆಗೆ ಬರುವುದು. ಒಂದು ವೇಳೆ ಬಿಡಿಸಿದ ಉತ್ತರ ತಪ್ಪಾಗಿದ್ದರೆ ಹಾವಿನ ಬಾಯಿಯ ಮೂಲಕ ಕೆಳಮುಖವಾಗಿ ಇಳಿಯುತ್ತಾ ಬಾಲವಿರುವ ಮನೆಗೆ ತಲುಪಬೇಕು.
4. ಈ ರೀತಿ ಸಮಸ್ಯೆಗಳನ್ನು ಬಿಡಿಸುತ್ತಾ ಮನೆಗಳನ್ನು ದಾಟುತ್ತಾ ತನ್ನ ಗುರಿಯನ್ನು 30ನೇ ಮನೆಗೆ ತರಬೇಕು.
5. ಒಂದು ಸಮಸ್ಯೆಯನ್ನು ಸರಿಯಾಗಿ ಬಿಡಿಸಿದರೆ ಒಂದು ಅಂಕವನ್ನು ನೀಡಿ ಮಗು ಸರಿಯಾಗಿ ಬಿಡಿಸಿರುವ ಸಮಸ್ಯೆಗಳ ಆಧಾರದ ಮೇಲೆ ಪ್ರಥಮ, ದ್ವಿತೀಯ, ತೃತೀಯ ಎಂದು ನಿರ್ಧರಿಸುವುದು.
6. ಸಮಸ್ಯೆಗಳನ್ನು ಬಿಡಿಸುವಾಗ ಯಾವ ಮನೆಯಲ್ಲಿನ ಸಮಸ್ಯೆಗಳನ್ನು ಬಿಡಿಸುವಲ್ಲಿ ತಪ್ಪಾಗಿದೆ ಎಂದು ದೃಢೀಕರಿಸಿ ಅದೇ ಮನೆಯಿಂದ ಮತ್ತೆ ಆಟವನ್ನು ಪ್ರಾರಂಭಿಸಲು ಹೇಳುವುದು.

10



# ನನ್ನ ಸಾಧನೆ

159

1) **501 ರಿಂದ 600ರವರೆಗೆ ಎಣಿಕೆ ಮಾಡಿ ಬರೆಯಿರಿ.**

2) **601 ರಿಂದ 700ರವರೆಗೆ ಎನಿಕೆ ಮಾಡಿ ಬರೆಯಿರಿ.**

3) **ಈ ಕೆಳಗಿನವುಗಳನ್ನು ಅಕ್ಷರದಲ್ಲಿ ಬರೆಯಿರಿ.**

1. 653  2. 798  3. 897

4) **ಈ ಕೆಳಗಿನವುಗಳನ್ನು ಓದುವ ಕ್ರಮದಲ್ಲಿ ಬರೆಯಿರಿ.**

1. 525 < 826 ....................
2. 615 > 570 ....................
3. 900 = 900 ....................

5) **ಕೆಳಗಿನವುಗಳಲ್ಲಿ ಕನಿಷ್ಠ ಸಂಖ್ಯೆಯ ಸುತ್ತ ವೃತ್ತ ಹಾಕಿರಿ.**

1. 801, 305, 609, 563
2. 800, 960, 788, 618
3. 890, 987, 910, 680

6) **ಕೆಳಗಿನವುಗಳಲ್ಲಿ ಗರಿಷ್ಠ ಸಂಖ್ಯೆಯ ಸುತ್ತ ವೃತ್ತ ಹಾಕಿರಿ.**

1. 543, 989, 899, 684
2. 650, 874, 400, 800
3. 909, 990, 910, 900

7) **ಈ ಕೆಳಗಿನ ಸಂಖ್ಯೆಗಳನ್ನು ಏರಿಕೆ ಕ್ರಮದಲ್ಲಿ ಬರೆಯಿರಿ.**

1. 593, 608, 780, 890
2. 825, 480, 738, 675
3. 750, 595, 960, 258

8) **ಈ ಕೆಳಗಿನ ಸಂಖ್ಯೆಗಳನ್ನು ಇಳಿಕೆ ಕ್ರಮದಲ್ಲಿ ಬರೆಯಿರಿ.**

1. 596, 216, 818, 970
2. 975, 860, 475, 813
3. 750, 806, 995, 738

9) **ಈ ಕೆಳಗಿನ ಲೆಕ್ಕಗಳನ್ನು ಮಾಡಿರಿ.**

1. 154 + 131 − 200 = ☐
2. 184 + 132 − 150 = ☐
3. 300 + 100 − 400 = ☐

10

# ನನ್ನ ಸಾಧನೆ

159

## 10) ಈ ಕೆಳಗಿನ ಲೆಕ್ಕಗಳನ್ನು ಮಾಡಿರಿ.

| 1. | 2. | 3. | 4. |
|---|---|---|---|
| 552 | 364 | 563 | 531 |
| + 138 | + 213 | 242 | 144 |
| | | + 118 | + 123 |

## 11) ಈ ಕೆಳಗಿನ ಲೆಕ್ಕಗಳನ್ನು ಮಾಡಿರಿ.

| 1. | 2. | 3. | 4. |
|---|---|---|---|
| 584 | 710 | 934 | 679 |
| − 327 | − 404 | − 523 | − 344 |

## 12) ಕೆಳಗಿನ ಸಮಸ್ಯೆಗಳಿಗೆ ಉತ್ತರ ಕಂಡುಹಿಡಿಯಿರಿ.

1. ಒಂದು ಶಾಲೆಯಲ್ಲಿ 436 ಗಂಡು ಮಕ್ಕಳು, 399 ಹೆಣ್ಣುಮಕ್ಕಳು ಓದುತ್ತಿದ್ದಾರೆ ಹಾಗಾದರೆ ಆ ಶಾಲೆಯಲ್ಲಿ ಓದುತ್ತಿರುವ ಒಟ್ಟು ಮಕ್ಕಳೆಷ್ಟು ?
2. ಬಾಳೆಗೊನೆಯಲ್ಲಿ 294 ಹಣ್ಣುಗಳಿದ್ದವು. ಅವುಗಳಲ್ಲಿ 50 ಹಣ್ಣುಗಳನ್ನು ಇಲಿಗಳು ತಿಂದರೆ ಉಳಿದ ಹಣ್ಣುಗಳೆಷ್ಟು ?

## 13) ವಿಸ್ತರಿಸಿ ಬರೆಯಿರಿ.

1. 596 =
2. 942 =
3. 889 =

## ಮೌಖಿಕ ಲೆಕ್ಕಗಳು :

1. 910 ರಿಂದ 950ರವರೆಗಿನ ಸಂಖ್ಯೆಗಳನ್ನು ಹೇಳಿರಿ.
2. ಒಂದು ಬುಟ್ಟಿಯಲ್ಲಿ 200 ಕಿತ್ತಳೆ ಹಣ್ಣುಗಳಿವೆ. ಇನ್ನೊಂದು ಬುಟ್ಟಿಯಲ್ಲಿ 150 ಕಿತ್ತಳೆ ಹಣ್ಣುಗಳಿವೆ. ಎರಡೂ ಬುಟ್ಟಿಗಳಲ್ಲಿರುವ ಒಟ್ಟು ಕಿತ್ತಳೆ ಹಣ್ಣುಗಳೆಷ್ಟು ?
3. ಹತ್ತನೆ ತರಗತಿ ಪರೀಕ್ಷೆಗೆ ಕುಳಿತ 430 ವಿದ್ಯಾರ್ಥಿಗಳಲ್ಲಿ 400 ವಿದ್ಯಾರ್ಥಿಗಳು ಪಾಸಾದರೆ ಫೇಲಾದ ಮಕ್ಕಳ ಸಂಖ್ಯೆ ಎಷ್ಟು ?